
ANANTHKUMAR PRATISHTHANA

# ಅನಂತಪಥ



ವ್ಯಕ್ತಿ ವಿಶೇಷ ಮಾಲಿಕೆ
ಪುಟ 7 ಬ್ರಹ್ಮರ್ಷಿ ನಾರಾಯಣ ಗುರುಗಳು

ಸಂಪುಟ - 4 | ಸೆಪ್ಟೆಂಬರ್ - 2023 | ಸಂಚಿಕೆ - 39

# ಅನಂತ ಚೈತನ್ಯದ ಸಸ್ಯಾಗ್ರಹ : 401*








ಸೆಪ್ಟೆಂಬರ್ 22, 2015. ಶ್ರೀ ಅನಂತಕುಮಾರರ ಹುಟ್ಟುಹಬ್ಬದ ಆಚರಣೆಯ ಸಂದರ್ಭ. ಹುಟ್ಟುಹಬ್ಬದ ಕೇಕ್ ಕತ್ತರಿಸುವ ವಿಜೃಂಭಣೆಯ ಆಚರಣೆಗೆ ಅವರು ಒಪ್ಪುತ್ತಿರಲಿಲ್ಲ. ಬದಲಾಗಿ, ಸಮಾಜಕ್ಕೆ ಏನಾದರೂ ಹೊಸ ರೀತಿಯ ಕೊಡುಗೆ ಕೊಡಬೇಕು ಎಂಬುದು ಅವರ ಚಿಂತನೆಯಾಗಿತ್ತು. ಪರಿಸರತಜ್ಞ ಡಾ. ಯಲ್ಲಪ್ಪರೆಡ್ಡಿಯವರು "ಬೆಂಗಳೂರಿನಲ್ಲಿ ಏಳು ಜನರಿಗೆ ಒಂದು ಮರವಿದೆ, ಆದರೆ ಒಬ್ಬರಿಗೆ ಏಳು ಮರಗಳು ಬೇಕು" ಎಂದು ಹೇಳಿದ್ದರು. ಪರಿಸರ ಸಂರಕ್ಷಣಾವಾದಿ ಗೆಳೆಯರಾದ ಎಚ್. ಎನ್. ಎ. ಪ್ರಸಾದ್, ಟಿ.ವಿ. ರಾಮಚಂದ್ರ (ಐಐಎಸ್‌ಸಿ), ಹರೀಶ್ ಭಟ್ ಅವರೊಂದಿಗೆ ಅನಂತಕುಮಾರರ ಸತತ ಒಡನಾಟವನ್ನು ಗಮನಿಸಿದ್ದ ನಮಗೆ ಅನಂತಕುಮಾರರ ಹುಟ್ಟುಹಬ್ಬದ ದಿನದಂದು ಪರಿಸರ ಸಂರಕ್ಷಣೆಗೆ ಆದ್ಯತೆ ನೀಡುವ ಕಾರ್ಯಕ್ರಮವಾಗಿ ಗಿಡ ನೆಡುವ ಚಟುವಟಿಕೆ ಹಮ್ಮಿಕೊಳ್ಳಬಹುದೆಂದು ತೋರಿತು. ಹೀಗಾಗಿ, ಬಸವನಗುಡಿಯ ಟ್ಯಾಗೋರ್ ವೃತ್ತದಲ್ಲಿರುವ ಸರ್ಕಾರಿ ಶಾಲೆ ಬಳಿ 58 ಗಿಡಗಳನ್ನು ನೆಡುವುದು ಎಂದು ನಿರ್ಣಯಿಸಲಾಯಿತು. ಕಾಟಾಚಾರಕ್ಕೆಂದು ಮಾಡದೆ, 'ಅನಂತವನ' ಎಂಬ ಪರಿಕಲ್ಪನೆಯಿಟ್ಟುಕೊಂಡು ಗಿಡ ನೆಡುವ ಕಾರ್ಯಕ್ರಮ ಅಂದು ಪ್ರಾರಂಭವಾಯಿತು. ಅದಕ್ಕೆ ಮೂರು ತಿಂಗಳು ಮೊದಲೇ ವಿಶ್ವ ಪರಿಸರ ದಿನದಂದು ಸಂಸದರ ದತ್ತುಗ್ರಾಮ ರಾಗಿಹಳ್ಳಿಯಲ್ಲಿ ಗಿಡ ನೆಡುವ ಕಾರ್ಯಕ್ರಮವನ್ನು ಮಾಡಿದ್ದೆವು. ಅನಂತಕುಮಾರರ ಹುಟ್ಟುಹಬ್ಬ, ವಿಶ್ವ ಪರಿಸರ ದಿನಾಚರಣೆ, ರಾಗಿಹಳ್ಳಿಯಲ್ಲಿ ಗಿಡ ನೆಡುವುದು ಹಾಗೂ ಅಲ್ಲಿಯ ಸ್ವಾಮೀಜಿಗಳು ಮಾಡಿರುವ ಕೆಲಸ, ಈ ಎಲ್ಲವುಗಳ ಪರಿಣಾಮವಾಗಿ, 2016ರ ಜನವರಿ 1ರಂದು ಹೊಸವರ್ಷದ ಸಂಕಲ್ಪವಾಗಿ ಪ್ರತೀ ಭಾನುವಾರ ಗಿಡ ನೆಡುವ 'ಹಸಿರಿನ ಸಂಕಲ್ಪ' ತೆಗೆದುಕೊಂಡೆವು. ಅದರಂತೆ ಜನವರಿ 3ರಂದು ಮೊದಲ ಹಸಿರು ಭಾನುವಾರ ಕಾರ್ಯಕ್ರಮ ಪ್ರಾರಂಭವಾಯಿತು. ಒಂದು ಚಳುವಳಿಯ ರೂಪದಲ್ಲಿ ಪ್ರತೀ ಭಾನುವಾರವೂ ಗಿಡ ನೆಡುವ ಅಸಾಮಾನ್ಯ ಸಂಕಲ್ಪ ತೆಗೆದುಕೊಂಡ ಮೇಲೆ ಗುಂಡಿ ತೋಡುವ ವಿಧಾನ, ಸಸ್ಯಗಳ ನಡುವಣ ಅಂತರ, ಅವಕ್ಕೆ ನೀರುಣಿಸುವ ಕ್ರಮ ಮುಂತಾದ ಹಲವು ವಿಷಯಗಳನ್ನು

ಪುಟ 4 ರಲ್ಲಿ ಮುಂದುವರೆದಿದೆ









## ಐಐಇಎಸ್‌ಟಿ ಅಧ್ಯಕ್ಷರಾಗಿ

### ಶ್ರೀಮತಿ ತೇಜಸ್ವಿನಿ ಅನಂತಕುಮಾರ್




ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರನ್ನು ಪಶ್ಚಿಮಬಂಗಾಲದ ಹೌರಾ ಜಿಲ್ಲೆಯ ಶಿಬ್‌ಪುರದಲ್ಲಿರುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಸಂಸ್ಥೆಯ ಆಡಳಿತ ಮಂಡಳಿಗೆ ಅಧ್ಯಕ್ಷರನ್ನಾಗಿ ನೇಮಿಸಿ ಭಾರತದ ರಾಷ್ಟ್ರಪತಿಯವರು ಆದೇಶ ಹೊರಡಿಸಿದ್ದಾರೆ. ಇವರ ಅಧಿಕಾರಾವಧಿಯು 25/08/2023 ರಿಂದ ಮೂರು ವರ್ಷಗಳಾಗಿರುತ್ತದೆ.

1856ರಲ್ಲಿ ಸ್ಥಾಪನೆಯಾದ ಈ ಸಂಸ್ಥೆಯು, ಭಾರತ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಗೆ ಸೇರಿದ್ದು, ರಾಷ್ಟ್ರೀಯ ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗಳ ಪರಿಷತ್ತಿನ (NITSER) ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತದೆ.

# ನಿಜಜೀವನದ ಕಲಾವಿದ ಅನಂತಣ್ಣ

ಅನಂತಕುಮಾರರು ನನಗೆ ಪರಿಚಯವಾಗಿದ್ದು ನಾನು ರಾಜಕೀಯಕ್ಕೆ ಬಂದ ಮೇಲೆ. ಆಗ ಅವರು ಕೇಂದ್ರಸರಕಾರದಲ್ಲಿ ಮಂತ್ರಿಗಳಾಗಿದ್ದರು. ಅಲ್ಲಿಯವರೆಗೆ ನಾನು ಒಬ್ಬ ಕಲಾವಿದೆಯಾಗಿ, ವಿದ್ಯಾರ್ಥಿಯಾಗಿ ಅವರ ಬಗ್ಗೆ ಪತ್ರಿಕೆಗಳಲ್ಲಿ ಓದುತ್ತಿದ್ದೆ; ಆದರೆ, ವೈಯಕ್ತಿಕವಾಗಿ ನನಗೆ ಅವರ ಪರಿಚಯವಿರಲಿಲ್ಲ. ಭಾರತೀಯ ಜನತಾ ಪಕ್ಷದ ಸಕ್ರಿಯ ಕಾರ್ಯಕರ್ತೆಯಾದ ಮೇಲೆ ಎಲ್ಲ ನಾಯಕರನ್ನು ಭೇಟಿ ಮಾಡುತ್ತಾ, ಕೊನೆಗೆ ಒಂದು ದಿನ ಅನಂತಕುಮಾರರನ್ನೂ ಭೇಟಿ ಮಾಡಿದ್ದೆ. ಅದೊಂದು ಭಾವಪೂರ್ಣ ಕ್ಷಣ.

ನಾನು ಅನಂತಕುಮಾರರನ್ನು ಅನಂತಣ್ಣ ಎಂದೇ ಕರೆಯುವುದು. ಅನಂತಣ್ಣ, ಒಬ್ಬ ಕೇಂದ್ರದ ಮಂತ್ರಿಯಾಗಿಯೋ, ಭಾರತೀಯ ಜನತಾ ಪಕ್ಷದ ನಾಯಕರಾಗಿಯೋ, ವಾಗ್ಮಿಯಾಗಿಯೋ ಅಥವಾ ಸಾಹಿತಿಯಾಗಿಯೋ ನಮಗೆ ಕಾಣಲಿಲ್ಲ. ಕಲಾಜಗತ್ತಿನಲ್ಲಿರುವ ನಮಗೆ ಅವರೊಬ್ಬ ಸಮರ್ಥ ಕಲಾವಿದನಂತೆ ಕಾಣಿಸುತ್ತಿದ್ದರು. ಅವರು ತಮಗೆ ಎಲ್ಲವೂ ಗೊತ್ತಿದೆ ಎಂದು ತೋರಿಸಿಕೊಳ್ಳದೆ ಮಕ್ಕಳಲ್ಲಿ ಮಕ್ಕಳಾಗಿ, ಬುದ್ಧಿವಂತರಲ್ಲಿ ಬುದ್ಧಿವಂತರಾಗಿ, ದಡ್ಡರ ಜೊತೆ ಇನ್ನೂ ದಡ್ಡರ ತರಹ ಇರುತ್ತಿದ್ದರು. ಹೆಣ್ಣುಮಕ್ಕಳ ಸಮೂಹದಲ್ಲಿ ಹೇಗೆ ಮಾತನಾಡಬೇಕು ಮತ್ತು ಸಾಮಾನ್ಯವಾಗಿ ಎಲ್ಲರೂ ಸೇರಿದಾಗ ಹೇಗೆ ಮಾತನಾಡಬೇಕು ಎಂಬ ಪರಿಜ್ಞಾನ ಅವರಲ್ಲಿತ್ತು. ಯಾವುದೇ ಪಾತ್ರ ನೀಡಿದರೂ ಅದನ್ನು ಸಮರ್ಥವಾಗಿ, ಆ ಪಾತ್ರದ ಭಾವಕ್ಕೆ ಧಕ್ಕೆ ಆಗದ ಹಾಗೆ ನಟಿಸುವ ಕಲಾವಿದನಂತೆಯೇ ಅನಂತಕುಮಾರರು ಎಲ್ಲ ಸನ್ನಿವೇಶಗಳಲ್ಲೂ ತಮ್ಮ ನಾಯಕತ್ವಕ್ಕೆ ತಕ್ಕುದಾದ ರೀತಿಯಲ್ಲಿ ವರ್ತಿಸುತ್ತಿದ್ದರು. ಬಹುಶಃ ಅವರ ಇಂತಹ ಗುಣಗಳು ಹಾಗೂ ಸರಳ, ಮುಗ್ಧ ಮಾತುಗಳು ನಮ್ಮೆಲ್ಲರನ್ನೂ ಸೆಳೆಯುತ್ತಿದ್ದವು ಎಂದು ನಾನು ಭಾವಿಸುತ್ತೇನೆ.

ನಮ್ಮ ಕಣ್ಣ ಮುಂದೆಯೇ ನಡೆದ ಘಟನೆಯೊಂದು ಅನಂತಕುಮಾರರ ನಾಯಕತ್ವದ ಬಗೆಯನ್ನು ತಿಳಿಸುತ್ತದೆ. ಒಬ್ಬ ಮಹಿಳೆ ಅನಂತಕುಮಾರರೊಂದಿಗೆ ಮಾತನಾಡುತ್ತ 'ನಾನು ಕೆಲಸ ಮಾಡುವ ಸ್ಥಳದಲ್ಲಿ ಸಹೋದ್ಯೋಗಿಗಳು ನನ್ನ ಬೆನ್ನ ಹಿಂದೆ ಏನೇನೋ ಮಾತನಾಡುತ್ತಾರೆ' ಎಂದು ಬೇಸರದಿಂದ ತಮ್ಮ ದುಗುಡವನ್ನು ಹೇಳಿಕೊಂಡರು. ಅನಂತಕುಮಾರರು ತತ್‌ಕ್ಷಣವೇ, "ಅವರು ನಿಮ್ಮ ಬೆನ್ನ ಹಿಂದೆ ಮಾತಾಡುತ್ತಾರೆ ಎಂದರೆ ನೀವು ಅವರಿಗಿಂತ ಎರಡು ಹೆಜ್ಜೆ ಮುಂದಿದ್ದೀರಿ ಎಂದರ್ಥ; ಇದಕ್ಕಾಗಿ ನೀವು ಖುಷಿ ಪಡಬೇಕು" ಎಂದು ಬಿಟ್ಟರು. ಋಣಾತ್ಮಕ ವಿಷಯವನ್ನು ಗುಣಾತ್ಮಕವಾಗಿ ಹೇಗೆ ಸ್ವೀಕರಿಸಬೇಕೆನ್ನುವ ಅನಂತಕುಮಾರರ ಸಲಹೆ ಆ ಮಹಿಳೆಗೆ ಮನದಟ್ಟಾಯಿತು; ಅಕೆಯ ಮುಖದಲ್ಲಿ ಸನ್ನಿವೇಶವನ್ನು ಎದುರಿಸುವ ದೃಢತೆ ಮೂಡಿತು. ಅನಂತಕುಮಾರರು ಎಂತಹ ಸಮಸ್ಯೆಯನ್ನಾದರೂ ಆ ಕ್ಷಣವೇ ಗ್ರಹಿಸಿ, ಅದಕ್ಕೆ ಸೂಕ್ತ ಪರಿಹಾರ ನೀಡುತ್ತಿದ್ದರಲ್ಲದೇ, ಸಮಸ್ಯೆಗಳನ್ನು ಮಾನಸಿಕವಾಗಿಯೂ ಎದುರಿಸಲು ತಯಾರು ಮಾಡುತ್ತಿದ್ದರು.

ಇದು ಅನಂತಕುಮಾರರ ನಾಯಕತ್ವದ ವಿಶೇಷತೆ. ಅಂಬರೀಷಣ್ಣ ಮತ್ತು ಅನಂತಣ್ಣ ಇಬ್ಬರೂ ನನಗೆ ಆತ್ಮೀಯರು. ಅಂಬರೀಷ್ ಯಾವಾಗಲೂ ತಮಾಷೆಯಾಗಿ ಮಾತಾಡುತ್ತಿದ್ದರು; ಅನಂತಕುಮಾರ್ ಗಂಭೀರವಾಗಿರುತ್ತಿದ್ದರು. ಆದರೆ, ಇಬ್ಬರೂ ಮಾತಿಗೆ ಕುಳಿತುಕೊಂಡಾಗ, ತಮಾಷೆಯ ಮಾತುಗಳೇ ಇರುತ್ತಿದ್ದವು. ಇಂತಹ ವ್ಯಕ್ತಿ ಎಂಥ ಮಹತ್ತ್ವದ ಸ್ಥಾನದಲ್ಲಿದ್ದರೆಂಬುದು ಅಚ್ಚರಿ ಮೂಡಿಸುವ ವಿಷಯ. ಅನಂತಕುಮಾರ್ ಕೇಂದ್ರದಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ರಾಜ್ಯದ ಗಂಭೀರ ಸಮಸ್ಯೆಗಳನ್ನು ಸುಲಲಿತವಾಗಿ ಬಗೆಹರಿಸುತ್ತಿದ್ದರು, ಕೇಂದ್ರ ಮತ್ತು ರಾಜ್ಯದ ನಡುವೆ ದೊಡ್ಡ ಸೇತುವೆಯಾಗಿ ಕೆಲಸ ಮಾಡಿದರು ಎಂದು ಅವರ ಸಂಪರ್ಕದಲ್ಲಿದ್ದ ಪ್ರತಿಯೊಬ್ಬರೂ ಪಕ್ಷಾತೀತವಾಗಿ ಸ್ಮರಿಸಿಕೊಳ್ಳುತ್ತಾರೆ. ನರೇಂದ್ರ ಮೋದಿಯವರ ಸಂಪುಟದಲ್ಲಿ ಸಂಸದೀಯ ವ್ಯವಹಾರಗಳ ಸಚಿವರಾಗಿ ಅವರು ಪಡೆದ ಯಶಸ್ಸಿಗೆ ಅವರ ಇಂತಹ ಗುಣಗಳೇ ಕಾರಣ ಎಂದರೆ ಅತಿಶಯೋಕ್ತಿಯಲ್ಲ. ನನಗಂತೂ ಅವರು ರಾಜಕೀಯವಾಗಿ ಮಾರ್ಗದರ್ಶಕರಾಗಿದ್ದರು.



**ತಾರಾ ಅನುರಾಧ**
**ಚಲನಚಿತ್ರ ಕಲಾವಿದೆ**

ರಾಖಿ ಹಬ್ಬ ಬಂದಾಗ ನಾನು ಅಣ್ಣ, ಅನಂತಕುಮಾರರಿಗೆ ರಾಖಿ ಕಟ್ಟುತ್ತಿದ್ದೆ. ನನಗೆ ಅವರ ಅನಾರೋಗ್ಯದ ಬಗ್ಗೆ ತಿಳಿದಿರಲಿಲ್ಲ. ಒಮ್ಮೆ ಭೇಟಿಯಾದಾಗ, "ಅಣ್ಣ ನೀವು ತುಂಬಾ ಸೊರಗಿದ್ದೀರಿ" ಎಂದೆ. ಅವರು "ನೀವು ಸಿನಿಮಾದವರು. ಸ್ಲಿಮ್ ಆಗಿ ಕಾಣಬೇಕು. ನಾನು ನೋಡಿ, ಎಷ್ಟು ಕಷ್ಟಪಡ್ತಾ ಇದ್ದೀನಿ" ಎಂದು ವಿನೋದ ಮಾಡಿದ್ದರು. ಅಂತಹ ಅನಾರೋಗ್ಯದಲ್ಲೂ ಅವರ ಹಾಸ್ಯಪ್ರಜ್ಞೆ ಜಾಗೃತವಾಗಿತ್ತು. ಅವರು ಲಂಡನ್‌ಗೆ ಚಿಕಿತ್ಸೆಗಾಗಿ ಹೋಗುವ ಮುಂಚೆ ನನ್ನ ನಟನೆಯ 'ಹೆಬ್ಬೆಟ್ಟು ರಾಮಕ್ಕ' ಮತ್ತು 'ಸಾವಿತ್ರಿ ಬಾಯಿ ಫುಲೆ'-ಈ ಎರಡೂ ಚಿತ್ರಗಳ ಪ್ರತಿಗಳನ್ನು ಕೊಡಲು ಕೇಳಿದ್ದರು. ಕಾರಣಾಂತರದಿಂದ ತಲುಪಿಸಲು ಆಗಲಿಲ್ಲ. ಆ ನೋವು ನನ್ನನ್ನು ಇಂದಿಗೂ ಕಾಡುತ್ತಿದೆ. ಸರಳ ಬದುಕಿನಿಂದ, ಉನ್ನತ ವಿಚಾರಗಳಿಂದ ಅಸಾಮಾನ್ಯರಾದ ಅನಂತಕುಮಾರರು ಸಾಮಾನ್ಯ ಕಾರ್ಯಕರ್ತರನ್ನೂ ಆತ್ಮೀಯವಾಗಿ ಮಾತನಾಡಿಸುತ್ತಿದ್ದರು. ಅನಂತಕುಮಾರರ ಮಾದರಿ ವ್ಯಕ್ತಿತ್ವವನ್ನು ಬಿಂಬಿಸುವ ಲೇಖನಗಳು 'ಅನಂತಪಥ' ಮಾಸಪತ್ರಿಕೆಯಲ್ಲಿ ಪ್ರಕಟವಾಗುತ್ತಿವೆ. ಅನಂತಕುಮಾರರ ಸಾಧನೆಗಳ ಜೊತೆಗೆ ಇತರ ವಿಷಯಗಳನ್ನು ಕುರಿತ ಬರಹಗಳೂ ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿವೆ. ಸಂಸ್ಕೃತಿ ಬೆಳೆಸುವ ಇಂತಹ ಪತ್ರಿಕೆಗಳನ್ನು ಯುವಕರು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಈ 'ಅನಂತಪಥ' ಹೀಗೆಯೇ ಯಶಸ್ವಿಯಾಗಿ ಪ್ರಕಟವಾಗುತ್ತಿರಲಿ.



# ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

## ಅಧ್ಯಾಯ- 15 ಆಂಟಿ ಸ್ಕೂಲು



ಮೈಸೂರಿನಿಂದ ಬಂದು ಉತ್ತರ ಕರ್ನಾಟಕದ ಪರಿಸರಕ್ಕೆ ಒಗ್ಗಿಕೊಳ್ಳುವುದು ನಾರಾಯಣ ಶಾಸ್ತ್ರಿಯವರಿಗೇನೂ ಕಷ್ಟವಾಗಿರಲಿಕ್ಕಿಲ್ಲ. ಧೂಳು ತುಂಬಿದ ಮಣ್ಣುರಸ್ತೆಯಲ್ಲಿ ಕಾಲೊನಿಯಿಂದ ಕಚೇರಿಗೆ ಎರಡು ಕಿಲೋಮೀಟರ್ ದೂರ ಸೈಕಲ್ಲಿನಲ್ಲಿ ಹೋಗಿ ಬರುವುದೊಂದು ಶ್ರಮವಾಗಿದ್ದೀತು. ಉಳಿದಂತೆ ತಮ್ಮ ಕೆಲಸ ತಮ್ಮ ಪಾಡು; ಕಾಲೊನಿಯಲ್ಲಿದ್ದ ಮಿತ್ರರ ಒಡನಾಟವಂತೂ ಅವರಿಗೆ ಪ್ರಿಯವೇ ಆಗಿತ್ತು. ಗಿರಿಜಾ ಶಾಸ್ತ್ರಿಯವರಿಗೆ ಅಲ್ಲಿಯವರೆಗಿನ ಬೆಂಗಳೂರಿನ ಜೀವನಕ್ಕಿಂತ ಹುಬ್ಬಳ್ಳಿಯ ಪರಿಸರ ತೀರಾ ವಿಭಿನ್ನವಾಗಿ ತೋರಿತ್ತು. ಅಲ್ಲಿಯ ಜನ, ಅವರ ಭಾಷೆಯ ಶೈಲಿ, ನಡವಳಿಕೆ, ಆಚಾರವಿಚಾರ, ಊಟತಿನಿಸುಗಳೆಲ್ಲ ಬೇರೆಯೇ. ಈ ಹಿಂದೆ, ಆಕೆ ತಾನು ಹುಟ್ಟಿ ಬೆಳೆದ ಶ್ರೀಮಂತ ನಾಗರಿಕ ವಾತಾವರಣದಿಂದ ಹೊರಬಂದು ಕೆಳಮಧ್ಯಮವರ್ಗದ ಪರಿಸರಕ್ಕೆ ಒಗ್ಗಿಕೊಳ್ಳಬೇಕಾದ ಅನಿವಾರ್ಯತೆ ಒದಗಿತ್ತು. ಕಾಲೊನಿಯ ಸಾಮಾಜಿಕ ಜೀವನ, ಆತ್ಮೀಯ ಒಡನಾಟ, ಪಾರಸ್ಪರಿಕ ಒತ್ತಾಸೆಗಳು ಗಿರಿಜಾ ಶಾಸ್ತ್ರಿಯವರಿಗೆ ಧೈರ್ಯ ತಂದುಕೊಟ್ಟುವಲ್ಲದೆ, ಅವರ ಸೃಜನಶೀಲ ಪ್ರತಿಭೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದಕ್ಕೆ ಪೂರಕ ವಾತಾವರಣವನ್ನು ಒದಗಿಸಿಕೊಟ್ಟವು.

ಹಾಗೆ ನೋಡಿದರೆ ತಮ್ಮ ಮನೆಯಲ್ಲಿ ಮಕ್ಕಳ ಯೋಗಕ್ಷೇಮವನ್ನು ಮುತುವರ್ಜಿಯಿಂದ ನೋಡಿಕೊಳ್ಳುತ್ತಿದ್ದವರು ನಾರಾಯಣ ಶಾಸ್ತ್ರಿಗಳೇ ಎಂದು ಮೇಲುನೋಟಕ್ಕೆ ಭಾಸವಾಗುತ್ತಿತ್ತು. ಅವರ ಪತ್ನಿ ಗಿರಿಜಾ ಶಾಸ್ತ್ರಿಯವರು ಸಾಮಾಜಿಕ ಸೇವಾಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿಯಿದ್ದವರು. ಮೊದಲಿಗೆ ಕಾಲೊನಿಯ ಎಲ್ಲ ಮನೆಗಳಿಗೆ ತಾವಾಗಿಯೇ ಹೋಗಿ ತಮ್ಮನ್ನು ಪರಿಚಯಿಸಿಕೊಂಡರು. ತನ್ನನ್ನು ಆಂಟಿ ಎಂದೇ ಕರೆಯಿರಿ, ಪರವಾಗಿಲ್ಲ ಎಂದು ಹೇಳಿಕೊಟ್ಟವರೂ ಅವರೇ. ಪರಿಚಿತರು ಅಪರಿಚಿತರೆನ್ನದೆ ಎಲ್ಲರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಿದ್ದ ಗಿರಿಜಾ ಶಾಸ್ತ್ರಿಯವರನ್ನು ಎಲ್ಲರೂ ಆಂಟಿ ಎಂದೇ ಸಂಬೋಧಿಸುತ್ತಿದ್ದುದು. ಮಕ್ಕಳು, ಮಹಿಳೆಯರಿರಲಿ, ಹನುಮಂತರಾಯರಂಥ ಹಿರಿಯರೂ ಗಿರಿಜಾರವರನ್ನು ಆಂಟಿ ಎಂದೇ ಗುರುತಿಸುತ್ತಿದ್ದರು. ಗಿರಿಜಾರವರನ್ನು ಭೇಟಿಮಾಡಲು ಮನೆಗೆ ಬಂದವರೊಡನೆ ನಾರಾಯಣ ಶಾಸ್ತ್ರಿಗಳೇ 'ಆಂಟಿ ಮನೆಯಲ್ಲಿಲ್ಲ' ಎಂದು ಹೇಳಿ ಕಳುಹಿಸುವುದಿತ್ತು. ಕ್ರಮೇಣ ಆಂಟಿ ಎಂಬ ಪದಕ್ಕೆ ಇದ್ದ ಸಾಮಾನ್ಯಾರ್ಥವೇ ಮರೆಯಾಗಿ ಆಂಟಿ ಎಂದರೆ ಗಿರಿಜಾ ಶಾಸ್ತ್ರಿಯವರೇ ಎನ್ನುವಂತಾಗಿತ್ತು.

ಹುಬ್ಬಳ್ಳಿಗೆ ಬಂದ ಪ್ರಾರಂಭದ ದಿನಗಳಲ್ಲಿ ಗಿರಿಜಾ ಶಾಸ್ತ್ರಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತೆಯಾಗಿದ್ದರು. ಪಕ್ಷದ ಚಟುವಟಿಕೆಗಳ ಕರಪತ್ರ ಹಂಚುವುದೋ, ಪೋಸ್ಟರ್ ಅಂಟಿಸುವುದೋ ಮೊದಲಾದ ಕೆಲಸಗಳ ಉಸ್ತುವಾರಿಯನ್ನೂ ಮಾಡಿದ್ದುಂಟು. ಒಮ್ಮೆ ಹೀಗೊಂದು ಪೋಸ್ಟರ್ ಅನ್ನು ಹನುಮಂತರಾಯರ ಮನೆಯ ಗೋಡೆಯ ಮೇಲೆ ಯಾರೋ ಅಂಟಿಸಿದ್ದರು. ಗಿರಿಜಾ ಶಾಸ್ತ್ರಿಯವರ ಗುಂಪಿನದೇ ಈ ಕೃತ್ಯವೆಂದು ತಿಳಿದ ಹನುಮಂತರಾವ್ ತಾನು ಆರೆಸ್ಸೆಸ್ ಬೆಂಬಲಿಗ, ತನ್ನ ಮನೆಯ ಮುಂದೆ ಕಾಂಗ್ರೆಸ್ ಪಾರ್ಟಿಯ ಪೋಸ್ಟರ್ ಹಾಕಿರುವುದೇಕೆಂದು ಆಕ್ಷೇಪಿಸಿದರು. ಅಷ್ಟೇ ಅಲ್ಲ, ಪೋಸ್ಟರ್ ಅಂಟಿಸಿದ ತಪ್ಪಿಗೆ, ಒತ್ತಾಯಮಾಡಿ ಅವರಿಂದಲೇ ಪೋಸ್ಟರ್ ತೆಗೆಸಿದರಂತೆ.

ಕಾಲ ಎಷ್ಟು ಬೇಗ ಕ್ರಮಿಸುತ್ತದೆ ಎನ್ನುವುದೇ ಒಂದು ಅಚ್ಚರಿ. ಕಾಲಾಂತರದಲ್ಲಿ ಎಂತೆಂಥ ಪರಿವರ್ತನೆಗಳೂ ಆಗಬಹುದು ಎನ್ನುವುದು ಇನ್ನೂ ಬೆರಗು ಹುಟ್ಟಿಸಬಹುದು. ಕಾಂಗ್ರೆಸ್ ಪಕ್ಷದ ಚಟುವಟಿಕೆಗಳನ್ನು ತೊರೆದ ಗಿರಿಜಾ ಶಾಸ್ತ್ರಿಯವರು ಸಾಮಾಜಿಕ ಕಾರ್ಯಕರ್ತೆಯಾಗಿ ಜನಪ್ರಿಯರಾದರು, ಬಿಜೆಪಿ ಪಕ್ಷ ಸೇರಿ ಹುಬ್ಬಳ್ಳಿ ಭಾಗದ ರಾಜಕೀಯ ವಲಯಗಳಲ್ಲಿ ಪರಿಚಿತರಾದರು; ಜಾರ್ಜ್ ಫರ್ನಾಂಡಿಸ್, ಜಯಪ್ರಕಾಶ್ ನಾರಾಯಣ್, ವಿನೋಬಾ ಭಾವೆಯಂತಹ ಮಹನೀಯರಿಂದ ಸಮ್ಮಾನಿತರಾದರು. ೧೯೮೦ರ ದಶಕದಲ್ಲಿ ಹುಬ್ಬಳ್ಳಿ ಕಾರ್ಪೊರೇಶನ್ನಿನ ಉಪಮೇಯರ್ ಹುದ್ದೆಗೇರಿ ಯಶಸ್ಸು ಪಡೆದರು. ಇದೆಲ್ಲ ಎಷ್ಟೋ ವರ್ಷಗಳ ನಂತರದ ಕಥೆ. ಗಿರಿಜಾಶಾಸ್ತ್ರಿಯವರ ಹೆಸರನ್ನು ಹುಬ್ಬಳ್ಳಿಯ ಒಂದು ಪ್ರಮುಖ ಬೀದಿಗೆ ನಾಮಕರಣ ಮಾಡುವುದಕ್ಕೆ ಹತ್ತಿಪ್ಪತ್ತು ವರುಷಗಳ ಮುನ್ನ ಅವರು ಸಮುದಾಯಕ್ಕೆ ಪರಿಚಯವಾದುದು ಇಂದಿನ ಅಂಗನವಾಡಿಯ ಮೂಲರೂಪವಾದ ಒಂದು ಶಿಶುವಿಹಾರದ ಮೂಲಕ.

೧೯೬೦ರ ದಶಕದಲ್ಲಿ ಕಾಲಕ್ಕೆ ಆ ರೈಲ್ವೆ ವಸತಿಸಮುಚ್ಚಯದಲ್ಲಿ ಪುಟ್ಟ ಮಕ್ಕಳಿಗಾಗಿ ಬಾಲವಿಹಾರ ಅಥವಾ ನರ್ಸರಿ ಶಾಲೆಯೆನ್ನುವುದು ಇರಲಿಲ್ಲ. ಪ್ರಾಥಮಿಕ ಶಾಲೆ, ಪ್ರೌಢ ಶಾಲೆಗಳು ಇದ್ದವು. ರೈಲ್ವೆ ಉದ್ಯೋಗಿಗಳ ಪುಟ್ಟ ಮಕ್ಕಳು ಮನೆಯಲ್ಲೋ ಬೀದಿಯ ಧೂಳಿನಲ್ಲೋ ಆಟವಾಡಿಕೊಂಡು ಇರುವ ಪರಿಸ್ಥಿತಿಯಿತ್ತು. ಗಿರಿಜಾ ಎಲ್ಲ ರೈಲ್ವೇ ಕಾರ್ಮಿಕರ ಮಕ್ಕಳಿಗಾಗಿ ಬಾಲವಿಹಾರವನ್ನು ಪ್ರಾರಂಭಿಸಿದರು. ಕಾಲೊನಿಯಲ್ಲಿ ರೈಲ್ವೆ ಇಲಾಖೆಗೆ ಸೇರಿದ ಚಿಕ್ಕ ಕಟ್ಟಡವೊಂದಿತ್ತು. ಅಲ್ಲಿ ಬೆಳಗ್ಗೆ ೮ ರಿಂದ ೧೦ ರವರೆಗೆ ವೃತ್ತಪತ್ರಿಕೆಗಳನ್ನು ಓದುವ ವಾಚನಾಲಯ ವ್ಯವಸ್ಥೆಯಿತ್ತು. ಇನ್ನೊಂದು ಭಾಗದಲ್ಲಿ ಟೈಲರಿಂಗ್ ಕ್ಲಾಸ್ ನಡೆಯುವುದು. ಪ್ರತಿ ಶುಕ್ರವಾರ ಸಾಯಂಕಾಲ ೪ ಗಂಟೆಯಿಂದ ೫ ಗಂಟೆವರೆಗೂ ದೇವಿ ಗ್ರೂಪಿನ ತರಗತಿಗಳೂ ಅಲ್ಲೇ ನಡೆಯುತ್ತಿದ್ದವು.

ಅದೇ ಕಟ್ಟಡದಲ್ಲಿ ಬೆಳಗ್ಗೆ ೧೧ ರಿಂದ ೧ ಗಂಟೆತನಕ ಗಿರಿಜಾ ಶಾಸ್ತ್ರಿಯವರ ಶಿಶುವಿಹಾರ ನಡೆಯತೊಡಗಿತು. ಆಗಿನ ಕಾಲಕ್ಕೆ ತಿಂಗಳಿಗೆ ಒಂದು ರೂಪಾಯಿ ಶುಲ್ಕ ಮಾತ್ರವೇ ಇಟ್ಟಿದ್ದರು. ಈ ಚಿಕ್ಕ ಮಕ್ಕಳಿಗೆ ಪಾಠ ಹೇಳಿಕೊಡಲು, ಅಲ್ಲಿಯ ರೈಲ್ವೇ ಕಾರ್ಮಿಕರಲ್ಲೇ ಮೂರು ಜನ ವಿದ್ಯಾವಂತ ಹೆಣ್ಣುಮಕ್ಕಳನ್ನು ಕರೆದುಕೊಂಡು ಬಂದು ಕೆಲಸಕ್ಕೆ ನೇಮಿಸಿಕೊಂಡಿದ್ದರು. ಸಂಗ್ರಹವಾಗುವ ಒಂದು ರೂಪಾಯಿ ತಿಂಗಳ ಶುಲ್ಕದಿಂದಲೇ ಅವರಿಗೆ ಸಂಬಳ ಕೊಡಿಸುತ್ತಿದ್ದರು. ಆ ಕಾಲದಲ್ಲಿ ಕಾಲೊನಿಯಲ್ಲಿದ್ದ ಉದ್ಯೋಗಿಗಳ ಚಿಕ್ಕ ಮಕ್ಕಳೆಲ್ಲ ಗಿರಿಜಾ ಆಂಟಿಯ ಶಾಲೆಯಲ್ಲೇ ಅ ಆ ಇ ಈ, ಎ ಬಿ ಸಿ ಡಿ ಕಲಿತವು.

ಹೆಣ್ಣುಮಕ್ಕಳು ಸುಮ್ಮಸುಮ್ಮನೇ ಸಮಯ ಹಾಳು ಮಾಡುತ್ತಾರೆ ಎಂದು ಅವರನ್ನು ಚಟುವಟಿಕೆಯಲ್ಲಿರಿಸುವ ಸಲುವಾಗಿ ಗಿರಿಜಾ ಶಾಸ್ತ್ರಿಯವರು ಮಹಿಳಾಮಂಡಳಿಯನ್ನು ಪ್ರಾರಂಭಿಸಿದರು. ಅದಕ್ಕೆ ಮೊದಲು ಆ ಜಾತಿ ಈ ಜಾತಿಯೆನ್ನದೆ ಅನೇಕ ಜನರನ್ನು ಒಗ್ಗೂಡಿಸಿ ಲಲಿತಾಸಹಸ್ರನಾಮ, ಭಗವದ್ಗೀತೆಗಳನ್ನು ಹೇಳಿಕೊಡಲು ಶುರುಮಾಡಿದರು. ಹೆಣ್ಣುಮಕ್ಕಳಿಗೆ ಬದುಕಿನ ರೀತಿನೀತಿಗೆ ಸಂಬಂಧಪಟ್ಟ ವಿಷಯಗಳನ್ನೂ ಸಾಮಾಜಿಕ ಜವಾಬ್ದಾರಿಯನ್ನೂ ಕಲಿಸುತ್ತಿದ್ದರು. ಗಿರಿಜಾ ಶಾಸ್ತ್ರಿಯವರು ಹುಬ್ಬಳ್ಳಿಯಲ್ಲಿ ನಡೆಸತೊಡಗಿದ ಸಾಮಾಜಿಕ ಚಟುವಟಿಕೆಗಳು ಹಲವು. ೧೯೬೮ ರಿಂದ ೧೯೬೯ ಸುಮಾರಿಗೆ ಹುಬ್ಬಳ್ಳಿಗೆ ಮೊಟ್ಟ ಮೊದಲಬಾರಿಗೆ ಚಿನ್ಮಯ ಮಿಷನ್ ಆಶ್ರಯದಲ್ಲಿ ಭಗವದ್ಗೀತಾ ತರಗತಿಗಳನ್ನು ಶುರುಮಾಡಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ.

ಎಂ ಟಿ ಎಸ್ ಕಾಲೊನಿಗೆ ಗಿರಿಜಾ ಶಾಸ್ತ್ರಿಯವರು ಬಂದು ನೆಲೆಸಿದ ನಂತರ ಅಲ್ಲಿ ಹೊಸ ಸಂಚಲನ ಮೂಡಲು ಕಾರಣವಾಯಿತು. ಅಲ್ಲಿನ ಸ್ತ್ರೀಸಮೂಹಕ್ಕೆ ಅಪಾರ ಪ್ರೇರಣೆಯನ್ನು ನೀಡಿದ ಚಟುವಟಿಕೆಯೆಂದರೆ ದೇವಿಗ್ರೂಪ್. ಗಿರಿಜಾ ಶಾಸ್ತ್ರಿಯವರೇ ಕಾಲೋನಿಯಲ್ಲಿ ದೇವಿಗ್ರೂಪ್ ಎಂಬ ಸಂಘಟನೆಯನ್ನು ಪ್ರಾರಂಭಿಸಿದವರು. ಪ್ರತಿವರ್ಷದ ನವರಾತ್ರಿಯಲ್ಲಿ ಈ ದೇವಿಸಮೂಹದ ಚಟುವಟಿಕೆ, ಪೂಜಾವಿಧಿಗಳು ಬಹುವೈಭವದಿಂದ ಜರುಗುತ್ತಿದ್ದವು. ಅವರೊಡನೆ ಪೂಜಾವಿಧಿಯ ನೇತೃತ್ವ ವಹಿಸುತ್ತಿದ್ದ ಸರಸ್ವತೀ ಎಂಬ ಗೃಹಿಣಿ ಒಳ್ಳೆಯ ಹಾಡುಗಾರ್ತಿಯಾಗಿದ್ದರೆ, ಸೀತಾಲಕ್ಷ್ಮಿ ಎಂಬ ಮಹಿಳೆ ವಯೊಲಿನ್

ಪುಟ 4 ರಲ್ಲಿ ಮುಂದುವರೆದಿದೆ





ಪುಟ 3 ರಿಂದ ವಾದ್ಯ ನುಡಿಸುವುದರಲ್ಲಿ ಪರಿಣತಿ ಪಡೆದಿದ್ದರು. ಈ ಲಕ್ಷ್ಮಿ ಸರಸ್ವತಿ ಪಾರ್ವತಿ(ಗಿರಿಜೆ)ಯರು ಕೂಡಿ ದೇವಿಗ್ರೂಪ್ ಸಂಘಟನೆಗೆ ಶೋಭೆ ತಂದಿದ್ದರು. ಕಾರ್ಯಕ್ರಮ ನಡೆಸುವುದರಿಂದ ಮೊದಲುಗೊಂಡು ಬಂದವರಿಗೆ ಅರಿಶಿಣ ಕುಂಕುಮ ಕೊಡುವವರೆಗೂ ಅಚ್ಚುಕಟ್ಟಾದ ವ್ಯವಸ್ಥೆ ಮಾಡುತ್ತಿದ್ದರು.

ಪ್ರತಿ ಶುಕ್ರವಾರ ಬೆಳಗ್ಗೆ ಗಿರಿಜಾ ಲಲಿತಾ ಸಹಸ್ರನಾಮವನ್ನು ಪಠಿಸುವರು. ಒಂದು ವಾರವೂ ತಪ್ಪಿಸದೆ ಅವರ ಪಾರಾಯಣ ನಡೆಯುತ್ತಿತ್ತು. ಶುಕ್ರವಾರವೇ ಸಾಯಂಕಾಲದ ಹೊತ್ತು ದೇವಿ ಗ್ರೂಪ್ ವತಿಯಿಂದ ಕಾರ್ಯಕ್ರಮ ನಡೆಯುವುದು. ಒಂದು ಲಕ್ಷ್ಮೀ ಫೋಟೋ ಇಟ್ಟು, ಅಲ್ಲಿ ಪೂಜೆಗೆ ಏನು ಅಣಿ ಮಾಡಬೇಕೋ ಅದನ್ನೆಲ್ಲ ವ್ಯವಸ್ಥೆ ಮಾಡುವರು. ೨೦- ೨೫ ಜನ ಹೆಣ್ಣುಮಕ್ಕಳು ಬಂದು ಸೇರುವರು. ಅವರೆಲ್ಲ ಅಲ್ಲೇ ರೈಲ್ವೇ ಕಾಲೊನಿಯ ನಿವಾಸಿಗಳೇ. ಗಿರಿಜಾ ಶಾಸ್ತ್ರಿಯವರು ಯಾವುದಾದರೂ ಒಂದು ವಿಷಯದ ಬಗ್ಗೆ ತುಂಬಾ ಚೆನ್ನಾಗಿ ಮಾತಾಡುವರು. ಆಮೇಲೆ ಗುಂಪಿನ ಸದಸ್ಯರು ಹಾಡುಗಳನ್ನೋ ದೇವರ ನಾಮಗಳನ್ನೋ ಹಾಡುವರು. ಒಬ್ಬೊಬ್ಬರ ಮನೆಯವರು ಒಂದೊಂದು ಶುಕ್ರವಾರ ಪ್ರಸಾದ ಮಾಡಿಕೊಂಡು ಬಂದು ಎಲ್ಲರಿಗೂ ಹಂಚುವರು. ಗ್ರೂಪಿನ ಸದಸ್ಯರ ಪೈಕಿ ಯಾರ ಮನೆಯಲ್ಲಿಯಾದರೂ ಉಪನಯನವೋ ಗೃಹಪ್ರವೇಶವೋ ಮದುವೆಯೋ ಆಯಿತೆಂದರೆ, ಆ ಶುಭಕಾರ್ಯದ ಬಗೆಗೆ ನಾಲ್ಕು ಒಳ್ಳೆಯ ಮಾತನಾಡಿ ಹರಸುವುದಲ್ಲದೆ, ಅವರಿಗೆ ದೇವಿ ಗ್ರೂಪ್ ಕಡೆಯಿಂದ ಒಂದು ಉಡುಗೊರೆ ಕೊಡುವ ರೂಢಿಯನ್ನೂ ಇಟ್ಟುಕೊಂಡಿದ್ದರು.

ಶಂಕರಾಚಾರ್ಯರ ಜಯಂತಿ ಇನ್ನೊಂದು ವಿಶೇಷ ಕಾರ್ಯಕ್ರಮ. ಶಂಕರ ಜಯಂತಿಗೆ ಒಂದು ತಿಂಗಳು ಮುಂಚೆಯೇ ಈ ಕಾರ್ಯಕ್ರಮ ಶುರುವಾಗುತ್ತಿತ್ತು. ಪ್ರತಿ ದಿನ ಒಬ್ಬೊಬ್ಬರ ಮನೆಯಲ್ಲಿ ಶಂಕರಾಚಾರ್ಯರ ಫೋಟೋ ಇಟ್ಟು ಅಲ್ಲಿ ಪೂಜೆ ನೆರವೇರಿಸುತ್ತಿದ್ದರು. ಶಂಕರ ವಿಜಯ ಪುಸ್ತಕವನ್ನು ತಂದು ಗಿರಿಜಾರವರೇ ಒಂದೊಂದು ಅಧ್ಯಾಯ ಓದುವರು. ಕೊನೆಯಲ್ಲಿ ಎಲ್ಲರೂ ಹಾಡು ಹೇಳಿಕೊಂಡು ಆರತಿ ಮಾಡುತ್ತಿದ್ದರು. ಶಂಕರ ಜಯಂತಿಯ ದಿನ ಪುಸ್ತಕವಾಚನ ಪೂರ್ಣಗೊಂಡು ಕಾರ್ಯಕ್ರಮ ಸಮಾಪನಗೊಳ್ಳುವುದು. ಈ ಸಾಮುದಾಯಿಕ ಚಟುವಟಿಕೆ ಕಾಲೊನಿಯ ಎಲ್ಲ ಮಹಿಳೆಯರನ್ನೂ ಆತ್ಮೀಯವಾದ ಬಂಧದಲ್ಲಿ ಕೂಡಿಸಲು ನೆರವಾಯಿತು ಅಂದರೆ ಅತಿಶಯವಲ್ಲ. ಕಾಲೊನಿಯ ನಿವಾಸಿಗಳ ಪೈಕಿ ಒಬ್ಬ ಗೃಹಿಣಿ ಒಂದು ದಿನ ಮಾತಾಡಿಸಲಿಲ್ಲ, ಕಾಣಲು ಸಿಗಲಿಲ್ಲವೆಂದರೆ ಮರುದಿನವೇ ಯಾರಾದರೂ ಅವರ ಮನೆಗೆ ಹೋಗಿ ವಿಚಾರಿಸುವರು. ಅಭಿಪ್ರಾಯಭೇದಗಳೇನೇ ಇದ್ದರೂ ಹಾಗಲ್ಲ ಹೀಗೆ ಎನ್ನುವುದರಲ್ಲಿ ಕೊನೆಗೊಳ್ಳುವುದೇ ಹೊರತು ವೈಮನಸ್ಯಕ್ಕೆ ಹೋಗುತ್ತಿರಲಿಲ್ಲ. ತಮ್ಮ ವಿಚಾರವನ್ನು ಯಾರಾದರೂ ವಿರೋಧಿಸಿದರೂ ಗಿರಿಜಾ ಶಾಸ್ತ್ರಿಯವರು ಬೇಸರಪಟ್ಟುಕೊಳ್ಳುತ್ತಿರಲಿಲ್ಲ. "ಧೈರ್ಯವಾಗಿ ಮಾತಾಡಬೇಕಮ್ಮ, ನೀವು ಅಂದಿದ್ದರಲ್ಲಿ ಯಾವ ತಪ್ಪೂ ಇಲ್ಲ" ಎಂದೇ ಮುಕ್ತಮನಸ್ಸಿನಿಂದ ಹೇಳುತ್ತಿದ್ದರು. ಅಂದಿನ ಕಾಲದಲ್ಲಿ ಗಿರಿಜಾರವರ ಜೊತೆಗಾತಿಯಾಗಿದ್ದ ಗೃಹಿಣಿ ಮಂಜುಳಾ ರಾಘವೇಂದ್ರಮೂರ್ತಿ ಸ್ಮರಿಸಿಕೊಳ್ಳುವಂತೆ, ನಗರಗಳಲ್ಲಿ ಅಕ್ಕಪಕ್ಕದ ಮನೆಯವರೇ ಅಪರಿಚಿತರಾಗಿರುವ ಇಂದಿನ ದಿನಗಳನ್ನು ನೋಡಿದರೆ, ಹುಬ್ಬಳ್ಳಿಯ ಕಾಲೊನಿಯಲ್ಲಿದ್ದ ಸ್ನೇಹಸೌಹಾರ್ದಗಳು ಕನಸಿನಂತೆಯೇ ಭಾಸವಾಗುತ್ತವೆ. ●

ಪುಟ 1 ರಿಂದ

## ಅನಂತ ಚೈತನ್ಯದ ಸಸ್ಯಾಗ್ರಹ : 401*

ಪ್ರಾಯೋಗಿಕವಾಗಿಯೇ ಕಲಿತೆವು. 8-10 ಜನರಿಂದ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಮುಂದೆ ಸಾವಿರಾರು ಜನರು ಸ್ವಯಂಸೇವಕರಾಗಿ ತಮ್ಮನ್ನು ತೊಡಗಿಸಿಕೊಂಡರು. ಎರಡನೇ ವರ್ಷದಲ್ಲಿ 100ನೇ ಹಸಿರು ಭಾನುವಾರದ ಕಾರ್ಯಕ್ರಮವನ್ನು ಜಯನಗರದ ರಾಣಿ ಚೆನ್ನಮ್ಮ ಮೈದಾನದಲ್ಲಿ ದೊಡ್ಡ ಪ್ರಮಾಣದಲ್ಲಿ ಮಾಡಿದ್ದೆವು. ನೂರು ತಂಡಗಳು ನೂರು ಸ್ಥಳಗಳಲ್ಲಿ ಗಿಡಗಳನ್ನು ನೆಟ್ಟು ನಂತರ ಕ್ರೀಡಾಂಗಣದಲ್ಲಿ ಬಂದು ಸೇರಿಕೊಳ್ಳುವ ಕಾರ್ಯಕ್ರಮ. ಪ್ರತಿಯೊಂದು ಸ್ಥಳದಿಂದಲೂ ಬಂದ ವಿಡಿಯೋ ಮತ್ತು ಛಾಯಾಚಿತ್ರಗಳನ್ನು ಕ್ರೀಡಾಂಗಣದಲ್ಲಿ ವ್ಯವಸ್ಥೆಮಾಡಿದ್ದ ದೊಡ್ಡ ಪರದೆಯ ಮೇಲೆ ಪ್ರದರ್ಶಿಸಲಾಗುತ್ತಿತ್ತು. ಚಂದ್ರಶೇಖರ ಕಂಬಾರ ಹಾಗೂ ಇತರ ಗಣ್ಯರ ಜೊತೆಗೆ ಅನಂತಕುಮಾರರು ಕೃಷ್ಣರಾವ್ ಪಾರ್ಕ್‌ನಲ್ಲಿ ಗಿಡ ನೆಟ್ಟಿದ್ದರೆ, ಲಾಲ್ ಬಾಗ್ ಮುಂದೆ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಹಾಗೂ ಕೆಲವರು ಐದು ಗಿಡಗಳನ್ನು ನೆಟ್ಟಿದ್ದರು. ಇವತ್ತಿಗೂ ಆ ಗಿಡಗಳನ್ನು ಕಾಣಬಹುದು. ಜಯನಗರದ ರಾಣಿ ಚೆನ್ನಮ್ಮ ಕ್ರೀಡಾಂಗಣದ ಹೊರಭಾಗದಲ್ಲಿ ನನ್ನ ನೇತೃತ್ವದ ತಂಡ ನೂರು ಗಿಡಗಳನ್ನು ನೆಟ್ಟಿತ್ತು. ಟಿ.ವಿ.ರಾಮಚಂದ್ರ ಅವರು ಐಐಎಸ್‌ಸಿ ಆವರಣದಲ್ಲಿ ನೂರು ಗಿಡಗಳನ್ನು ನೆಟ್ಟಿದ್ದರು. ಆಗ ಕಾರ್ಪೊರೇಟರ್ ಆಗಿದ್ದ ಕೆಂಪೇಗೌಡರು, ನಮಗೆ ಆಲದ ಮರದಂತಹ ಬಹುಬೀಜ ಮರಗಳೆಂದು ಕರೆಯಲಾಗುವ ಫೈಕಸ್ ಗಿಡಗಳನ್ನು ನೀಡಿದ್ದು, ಅವುಗಳನ್ನೂ ನಾವು ನೆಟ್ಟಿದ್ದೆವು. ಹೀಗೆ, ಬೇರೆ ಬೇರೆಯವರು ಬೇರೆ ಬೇರೆ ಕಡೆ ಗಿಡಗಳನ್ನು ನೆಡುವಲ್ಲಿ ತಮ್ಮನ್ನು ತಾವು ಸ್ವಯಂಪ್ರೇರಿತವಾಗಿ ತೊಡಗಿಸಿಕೊಂಡಿದ್ದರು.

ಕ್ರಮೇಣ ಗಿಡ ನೆಡುವ ಯೋಜನೆಯು ವಾರಣಾಸಿ, ಜೋಧಪುರಗಳಿಗೂ ವಿಸ್ತರಿಸಿತು. ಪಶ್ಚಿಮ ಬಂಗಾಳದಿಂದಲೂ ಗಿಡನೆಟ್ಟ ವರದಿ ಬಂದಿತು. ಚಿತ್ರನಟ ಸುದೀಪ್ ಕೂಡ ಗಿಡ ನೆಡುವ ಮೂಲಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು. ನಮ್ಮ ಸ್ನೇಹಿತರೊಬ್ಬರು ಅಮೇರಿಕದಲ್ಲಿ ತಾವು ಗಿಡ ನೆಟ್ಟಿರುವ ಬಗ್ಗೆ ಫೋಟೋ ಕಳುಹಿಸಿಕೊಟ್ಟಿದ್ದರು. ಹೀಗೆ ಗಿಡನೆಡುವ ಕಾರ್ಯಕ್ರಮವು ದೇಶದಾದ್ಯಂತ 140 ಸ್ಥಳಗಳಲ್ಲಿ ನಡೆದು ನಿರೀಕ್ಷೆಗೂ ಮೀರಿ ಯಶಸ್ವಿಯಾಯಿತು. ನಂತರ ಬೆಂಗಳೂರಿನ ಎಲ್ಲ ತಂಡಗಳೂ ಒಂದೆಡೆ ಕಲೆತು ಊಟ, ಉಪಾಹಾರಗಳನ್ನು ಸ್ವೀಕರಿಸಿ ಸಂತಸಪಟ್ಟ ಆ ಅನುಭವ ಅವಿಸ್ಮರಣೀಯ.

ನೂರನೆಯ ಭಾನುವಾರದ ಸಂಭ್ರಮ ಹೀಗಿದ್ದರೆ, 130ನೇ ಭಾನುವಾರದ ಸಂದರ್ಭದಲ್ಲಿ, ಅನಂತಕುಮಾರರಿಗೆ ಅನಾರೋಗ್ಯ ಇತ್ತು. ಆದರೂ, ಅವರು 5 ನಿಮಿಷ ಬಂದು ಭಾಗವಹಿಸಿದ್ದರು. ಅವರು ಚಿಕಿತ್ಸೆಗಾಗಿ ಅಮೆರಿಕಕ್ಕೆ ಹೋಗುವ ಹಿಂದಿನ ವಾರವೂ ಸಹ ಕೆಂಪಾಂಬುಧಿ ಕೆರೆಯ ಅಂಗಳದಲ್ಲಿ ಗಿಡಗಳನ್ನು ನೆಟ್ಟಿದ್ದರು. ಬಹುಶಃ ಅದೇ ಅವರ ಕೊನೆಯ ಹಸಿರು ಭಾನುವಾರವಾಗಿತ್ತು. ಆ ಸಂದರ್ಭದಲ್ಲಿ, ಉದಯ ಗರುಡಾಚಾರ್, ಸದಾಶಿವ ಮತ್ತು ಸಿನಿಮಾ ತಾರೆ ಶೃತಿ ಕೂಡಾ ಭಾಗವಹಿಸಿದ್ದರು. ನಟಿ ತಾರಾ ಅವರೂ ನಮ್ಮ ಕಾರ್ಯಕ್ರಮಕ್ಕೆ ಬರುತ್ತಿದ್ದರು. ಕ್ರಿಕೆಟ್ ಆಟಗಾರರು, ಸದಾಶಿವಜೀ ಮೊದಲಾದ ಆರ್.ಎಸ್.ಎಸ್. ಪ್ರಮುಖರು ಹಾಗೂ ಸಮಾಜದ ವಿವಿಧ ಗಣ್ಯರು ಭಾಗವಹಿಸುತ್ತಿದ್ದರು.

ನನ್ನ ಹಾಗೂ ಅನಂತಕುಮಾರರ ಅನುಪಸ್ಥಿತಿಯಲ್ಲಿಯೂ ಸುಮಾರು 15-20 ವಾರಗಳ ಕಾಲ ಮುರಲೀಧರ ಮತ್ತು ಇಡೀ ತಂಡವು ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಯಿತು. ಅನಂತಕುಮಾರರು ತೀರಿಕೊಂಡ ದಿನವೂ ಲಾಲ್ ಬಾಗ್ ಮುಂದೆ ಅವರ ತಂಡವು ಕಾರ್ಯಕ್ರಮವನ್ನು ನಡೆಸಿತ್ತು. ಅನಂತಕುಮಾರ್ ಇಲ್ಲದ 151ನೇ ಭಾನುವಾರ ಕಾರ್ಯಕ್ರಮ ಮುಂದುವರಿಸಬೇಕೇ, ಬೇಡವೇ ಎಂಬ ಜಿಜ್ಞಾಸೆ ನಮ್ಮಲ್ಲಿ ಮೂಡಿತು. ಹಸಿರು ಬೆಳೆಸುವುದು ಪ್ರತಿಯೊಬ್ಬನ ಬದುಕಿನ ಭಾಗ ಹಾಗೂ ಕರ್ತವ್ಯವಾಗಬೇಕು ಎಂಬುದು ಅನಂತಕುಮಾರರ ಇಚ್ಛೆಯಾಗಿತ್ತು. ಅವರಿಲ್ಲವೆಂಬ ಕಾರಣಕ್ಕೆ ಅವರಿಗೆ ಪ್ರಿಯವಾದ ಗಿಡ ನೆಡುವ ಕಾರ್ಯಕ್ರಮವನ್ನು ನಿಲ್ಲಿಸಬಾರದು ಎಂದು ಭಾವಿಸಿ ಯೋಜನೆಯನ್ನು ಮುಂದುವರಿಸಿಕೊಂಡು ಹೋಗಲು ನಿರ್ಧರಿಸಿ 151ನೇ ಭಾನುವಾರವೂ ಗಿಡಗಳನ್ನು ನೆಟ್ಟಿದ್ದೆವು. 200ನೇ ಭಾನುವಾರದಂದು ಬೆಂಗಳೂರು ವಿಶ್ವವಿದ್ಯಾಲಯದ ನಾರ್ತ್ ಈಸ್ಟ್ ವಿಮೆನ್ ಹಾಸ್ಟೆಲ್ ಬಳಿಯಲ್ಲಿ 201 ಗಿಡಗಳನ್ನು ನೆಟ್ಟಿದ್ದೆವು. ಆ ಗಿಡಗಳೆಲ್ಲ ಎತ್ತರವಾಗಿಯೂ, ಕಾಡಿನ ಮಾದರಿಯಲ್ಲಿ ದಟ್ಟವಾಗಿಯೂ ಬೆಳೆದು ನಳನಳಿಸುತ್ತಿವೆ. ಹೀಗೆ 'ಹಸಿರು ಭಾನುವಾರ' ನಿರಂತರವಾಗಿದೆ. ಮೊದಮೊದಲು ವಿದ್ಯಾಶಂಕರ, ನಂತರ ಮುರಲೀಧರ, ತದನಂತರ ಶ್ರೀಕಾಂತ ಅವರೂ ಸಹ ಕಾರ್ಯಕ್ರಮದ ಸ್ವರೂಪವನ್ನು ಅರಿತು ಕೆಲಸ ಮಾಡುತ್ತಿದ್ದಾರೆ.

301ನೇ ಭಾನುವಾರವನ್ನು ಆಚರಿಸುವ ಬಗ್ಗೆ ಲಾಲ್ ಬಾಗ್‌ನ ವಾಕರ್ಸ್ ಗ್ರೂಪ್ ನವರೊಂದಿಗೆ ಚರ್ಚಿಸಿ, ಗಿರೀಶ್ ಮಾನೆಯವರ ಆಹ್ವಾನದ ಮೇರೆಗೆ ಅವರ ತೋಟದಲ್ಲಿ 1301 ಗಿಡ ನೆಡುವ ಮೂಲಕ ಆಚರಿಸಿದೆವು. ಗಿಡಗಳಿಗೆ ನೀರುಣಿಸುವ ಜವಾಬ್ದಾರಿಯನ್ನು ಮಾನೆಯವರೇ ವಹಿಸಿಕೊಂಡರು. ಆ ಸಂದರ್ಭದಲ್ಲಿ ಬಿಎಂಎಸ್ ಕಾಲೇಜು ಮತ್ತು ಆರ್. ವಿ. ಕಾಲೇಜುಗಳ ವಿದ್ಯಾರ್ಥಿಗಳೂ ಸೇರಿದಂತೆ 550ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು.

400ನೇ ಹಸಿರು ಭಾನುವಾರವನ್ನು ವಿಶೇಷವಾಗಿ ಆಚರಿಸಿದೆವು. ಸ್ಥಳದ ಸಮಸ್ಯೆ ಇರುವವರೂ ಮನೆಯ ತಾರಸಿಯ ಮೇಲೆ ತರಕಾರಿಗಳನ್ನು ಬೆಳೆಯಬಹುದು, ನಮ್ಮ ತರಕಾರಿಗಳನ್ನು ನಾವೇ ಬೆಳೆಯಬಹುದು ಎಂಬ ಬಗ್ಗೆ ಪ್ರಾತ್ಯಕ್ಷಿಕೆ ನಡೆಸುವುದರ ಜೊತೆಗೆ ಸಾರ್ವಜನಿಕರಿಗೆ 400 ಹೂವು-ಹಣ್ಣು-ಔಷಧೀಯ ಸಸ್ಯಗಳ ಕುಂಡಗಳನ್ನು ವಿತರಿಸುವ ಮೂಲಕ ಆಚರಿಸಲಾಗಿತ್ತು. ಸರ್ಜಾಪುರ-ಆನೇಕಲ್ ರಸ್ತೆಯ ಗೋಪಸಂದ್ರ ಬಳಿಯ ಮುತ್ತಾನಲ್ಲೂರು ಗ್ರಾಮದ ದೇವರಕೆರೆಯ ಪಕ್ಕದಲ್ಲಿ 401ನೇ ಹಸಿರು ಭಾನುವಾರವನ್ನು ಆಚರಿಸಲಾಯಿತು.

401 ವಾರಗಳಿಂದಲೂ ಕಾರ್ಯಕರ್ತರ ಉತ್ಸಾಹ ಏರುಗತಿಯಲ್ಲಿಯೇ ಇದೆ. ವಾರದಿಂದ ವಾರಕ್ಕೆ ಹಳೆಯ ಕಾರ್ಯಕರ್ತರ ಹೊತೆಗೆ ಹೊಸಬರೂ ಸೇರಿಕೊಳ್ಳುತ್ತಿದ್ದಾರೆ. ಹಳೆಯ ಬೇರಿನ ಜೊತೆ ಹೊಸ ಚಿಗುರು ಸೇರಿ ಪರಿಸರ ಸಂರಕ್ಷಣೆಯ ಕಳಕಳಿಯನ್ನು ಹೊಂದಿದ ಒಂದು ದೊಡ್ಡ ತಂಡವು ನಿರ್ಮಾಣಗೊಂಡು 'ಹಸಿರು ಭಾನುವಾರ'ನ್ನು ಮುನ್ನಡೆಸುತ್ತಿದೆ.

ನೀವು ನಿಮ್ಮ ನಿಮ್ಮ ನೆಲೆಗಳಲ್ಲಿಯೇ ಸಸ್ಯಾಗ್ರಹವನ್ನು ನಡೆಸಬೇಕೆಂಬುದು ನಮ್ಮ ಅಪೇಕ್ಷೆ. ನೀವು ತಿಂದ ಹಣ್ಣುಹಂಪಲುಗಳ ಬೀಜಗಳನ್ನು ಎಸೆಯದೇ ಒಂದೆಡೆ ಇಟ್ಟು ಅವುಗಳಿಂದ ಸಸಿಗಳನ್ನು ಬೆಳೆಸಿ ಅವಕಾಶ ದೊರೆತಾಗ ನೆಟ್ಟು ನೀರೆರೆಯಿರಿ. ನಿಮ್ಮ ಮಕ್ಕಳಿಗೂ ಇದರ ಮಹತ್ವವನ್ನು ವಿವರಿಸಿ ಹೇಳಿ. ●

- ಶ್ರೀಮತಿ ತೇಜಸ್ವಿನಿ ಅನಂತಕುಮಾರ್

# ದೇಶದ ಸಮಗ್ರತೆಗಾಗಿ, ಪ್ರಗತಿಗಾಗಿ ಸಮಾನ ನಾಗರಿಕ ಸಂಹಿತೆ




ವಿಜ್ಞಾನದಲ್ಲಿ ರಾಜಕೀಯವನ್ನು ಬೆರೆಸಬಾರದು ಎನ್ನುತ್ತಾರೆ. ಆದರೆ ದೇಶದ ಪ್ರಗತಿಯ ಮೂಲಸೆಲೆಯಂತಿರುವ ಕೆಲವು ವಿಷಯಗಳ ಬಗ್ಗೆ ಪರಿಣತರು ತಮ್ಮ ಕ್ಷೇತ್ರವನ್ನು ಮೀರಿ ತಮ್ಮ ಪರಿಣತಿಯನ್ನು ವ್ಯಕ್ತಪಡಿಸಬೇಕಾಗುತ್ತದೆ. ದೇಶವು ತನ್ನ ಮೇಲೆ ನಡೆದ ದೌರ್ಜನ್ಯಗಳನ್ನು ಮರೆತು ಕ್ಷಮಿಸಬಹುದು; ಅದು ಹಿಂದಿನ ತಲೆಮಾರಿನ ಬಗ್ಗೆ ತಲೆಕೆಡಿಸಿಕೊಳ್ಳದಿದ್ದರೂ ಮುಂದಿನ ತಲೆಮಾರುಗಳ ಬಗ್ಗೆ ಕಾಳಜಿ ವಹಿಸಲೇಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಾವು ತೆಗೆದುಕೊಳ್ಳಬೇಕಾದ ಅತ್ಯಂತ ಪ್ರಮುಖ ನಿರ್ಧಾರ ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೆ ತರುವುದು. ಇಂದು ನಮ್ಮ ದೇಶದ ಪರಿಸ್ಥಿತಿಯನ್ನು ಗಮನಿಸಿದರೆ ಇದು ಅಗತ್ಯ ಮಾತ್ರವಲ್ಲ; ಭಾರತದ ಏಕತೆಗೆ ಮತ್ತು ಪ್ರಗತಿಗೆ ಮೂಲಭೂತ ಅವಶ್ಯಕತೆಯಾಗಿದೆ.

ಧಾರ್ಮಿಕ ಮೂಲಭೂತವಾದಿಗಳು ದೇಶವಿಭಜನೆಯ ಮೂಲಕ ನಮ್ಮ ಹಿಂದಿನ ತಲೆಮಾರುಗಳಿಗೆ ಅನ್ಯಾಯ ಮಾಡಿರಬಹುದು; ಶಾಬಾನೋ ಪ್ರಕರಣದ ಮೂಲಕ ನಮ್ಮ ತಲೆಮಾರಿನ ಹಿತವನ್ನೂ ಬಲಿಕೊಟ್ಟಿರಬಹುದು. ಆದರೆ, ನಮ್ಮ ಮುಂದಿನ ತಲೆಮಾರನ್ನೂ ವಂಚಿಸಲು ನಾವು ಅವರಿಗೆ ಅವಕಾಶ ಕೊಡಬಾರದು; ಇದುವರೆಗೆ ನಡೆದ ಅನಾಹುತಗಳೇ ಸಾಕು, ಧಾರ್ಮಿಕ ಮೂಲಭೂತವಾದವನ್ನು ನಾವು ಸಹಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬೇಕು.

ಸಮಾನ ನಾಗರಿಕ ಸಂಹಿತೆಯ ಕುರಿತಾದ ಚರ್ಚೆ ವಾಸ್ತವದಿಂದ ದೂರಸರಿದರೆ ಅದು ಕೇವಲ ಅಭಿಪ್ರಾಯ ನಿರೂಪಣೆಯಾಗುತ್ತದೆ. ಆಗ ಪ್ರತಿಯೊಬ್ಬರೂ ತಮ್ಮದೇ ಆದ ಅಭಿಪ್ರಾಯಗಳನ್ನು ಬಲವಾಗಿ ಪ್ರತಿಪಾದಿಸುತ್ತಾರೆ. ಹೀಗಾಗಿ ವಾಸ್ತವದ ನೆಲೆಯಲ್ಲಿ ಜನರು ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ, ದೇಶದ ಸಂವಿಧಾನ ಸಭೆಯಲ್ಲಿ ನಡೆದ ಚರ್ಚೆಯನ್ನು ಪದಶಃ ಗಮನಿಸುವುದು ಅಗತ್ಯ. ಸಮಾನ ನಾಗರಿಕ ಸಂಹಿತೆಯ ವಿರೋಧಿಗಳು ಮುಂದೆ ಮಾಡುವ ನಾಲ್ಕು ಅಂಶಗಳ ಕಡೆ ನಮ್ಮ ಗಮನ ಹರಿಸೋಣ.

**ನಾವು ವಿವಿಧತೆಯನ್ನು ಪ್ರೋತ್ಸಾಹಿಸಬೇಕು:** ವಿವಿಧ ಧರ್ಮಗಳನ್ನು, ಸಂಸ್ಕೃತಿಗಳನ್ನು ಗೌರವಿಸಬೇಕು ಎಂಬುದು ನಿಜವಾದರೂ ವಿವಿಧತೆಯ ನೆಪದಲ್ಲಿ ತಾರತಮ್ಯವನ್ನು ಪ್ರೋತ್ಸಾಹಿಸಬಾರದು. ಈ ವಿಷಯದ ಸ್ಪಷ್ಟತೆಗಾಗಿ ಒಂದು ಉದಾಹರಣೆಯನ್ನು ಗಮನಿಸೋಣ. ತೀರ ಇತ್ತೀಚೆಗೆ, ಭಾರತದ ಸರ್ವೋಚ್ಚ ನ್ಯಾಯಾಲಯವು ಹಿಂದೂ ಮಹಿಳೆಯರಿಗೆ ೧೯೪೯ರಿಂದ ಪೂರ್ವಾನ್ವಯವಾಗಿ ಆನುವಂಶಿಕ ಆಸ್ತಿಯಲ್ಲಿ ಸಮಾನ ಪಾಲಿನ ಹಕ್ಕನ್ನು ನೀಡುವ ತೀರ್ಪು ನೀಡಿತು. ಹಿಂದೂ ಕಾನೂನುಗಳು ಮಹಿಳೆಯರ ಹಕ್ಕುಗಳನ್ನು ಗೌರವಿಸುತ್ತವೆ ಎಂಬುದು ನ್ಯಾಯಾಲಯ ನೀಡಿದ ಸಮರ್ಥನೆ. ಆದರೆ ಅದೇ ನ್ಯಾಯಾಲಯವು ಕುರಾನಿನ ವಚನ (೪.೧೧) ವನ್ನು ಎತ್ತಿ ತೋರಿಸಿ ಗಂಡುಮಕ್ಕಳ ಹಕ್ಕಿನ ಅರ್ಧ ಭಾಗ ಆಸ್ತಿಗೆ ಮಾತ್ರ ಮುಸ್ಲಿಂ ಮಹಿಳೆಯರು ಹಕ್ಕುದಾರರು ಎಂದು ತೀರ್ಪು ನೀಡಿತು. ಸಮಾನತೆ, ಸ್ತ್ರೀ ಸ್ವಾತಂತ್ರ್ಯ, ಹೆಂಗಸರ ಹಕ್ಕುಗಳು ಎಂದು ಉದ್ದುದ್ದ ಭಾಷಣ ಮಾಡುವ ಆಂದೋಲನ ಜೀವಿಗಳ ನೈತಿಕತೆ ಆಗ ಎಲ್ಲಿ ವಿಹರಿಸಲು ಹೋಯಿತು? ಇದು ತಾರತಮ್ಯವಲ್ಲವೆ? ಎಷ್ಟು ಕಾಲದವರೆಗೆ ಮುಸ್ಲಿಂ ಮಹಿಳೆಯರನ್ನು ವಿವಿಧತೆಯ ಪರದೆಯ ಒಳಗಿರಿಸಿ ವಂಚಿಸುತ್ತೀರಿ? ಸಂಸ್ಕೃತಿ ಮತ್ತು ಧರ್ಮ ಬೇರೆಯಾದ ಮಾತ್ರಕ್ಕೆ, ಆ ಧರ್ಮಕ್ಕೆ ತನ್ನದೇ ಆದ ವೈಯಕ್ತಿಕ ಕಾನೂನುಗಳಿವೆಯೆಂದ ಮಾತ್ರಕ್ಕೆ ಈ ತಾರತಮ್ಯ ಮುಂದುವರಿಯಬೇಕೇ?

**ಇದು ಅಲ್ಪಸಂಖ್ಯಾತರಿಗೆ ತೊಂದರೆ ಉಂಟುಮಾಡುತ್ತದೆ ಎಂಬ ತರ್ಕ:** ಸಮಾನ ನಾಗರಿಕ ಸಂಹಿತೆಯು ಗೋವಾ ರಾಜ್ಯದಲ್ಲಿ ಮೊದಲಿನಿಂದಲೂ ಜಾರಿಯಲ್ಲಿದೆ. ಇದು ಪೋರ್ಚುಗೀಸ್ ಮೂಲದ ಪರಿಕಲ್ಪನೆಯಾಗಿದ್ದು ಕೆಲವು ದೋಷಗಳನ್ನು ಹೊಂದಿದ್ದರೂ ರಾಜ್ಯದಲ್ಲಿರುವ ಶೇ ೩೮ರಷ್ಟು ಅಲ್ಪಸಂಖ್ಯಾತರು ಯಾವುದೇ ತಕರಾರಿಲ್ಲದೇ ಒಪ್ಪಿಕೊಂಡಿದ್ದಾರೆ. ಇದರಿಂದ ಗೋವಾದ ನಾಗರಿಕ ಸಮಾಜಕ್ಕೆ ಯಾವುದೇ ತೊಂದರೆ ಉಂಟಾಗಿಲ್ಲವೆಂಬುದನ್ನು ಗಮನಿಸಬೇಕು.



**ಡಾ. ಆನಂದ್ ರಂಗನಾಥನ್**
ಪ್ರಾಧ್ಯಾಪಕರು, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ನವದೆಹಲಿ

**ಸಂವಿಧಾನ ಸಭೆಯ ಆಶಯಗಳು:** ಈ ಕಾನೂನನ್ನು ವಿರೋಧಿಸುವ ಅನೇಕರು ಸಂವಿಧಾನವೊಂದೇ ನಾವು ಗೌರವಿಸುವ ಗ್ರಂಥ, ಇತರ ಧಾರ್ಮಿಕ ಗ್ರಂಥಗಳು ನಮಗೆ ಮಾನ್ಯವಲ್ಲ ಎಂದು ಹೇಳುತ್ತಾರೆ. ಡಾ. ಅಂಬೇಡ್ಕರ್ ಈ ಕಾನೂನಿನ ಪರವಾಗಿದ್ದರು. ಸಂವಿಧಾನದ ನಿರ್ದೇಶಕ ತತ್ತ್ವಗಳಲ್ಲಿ (ಕಲಂ ೪೪) ಸೇರಿಕೊಂಡಿರುವ ಸಮಾನ ನಾಗರಿಕ ಸಂಹಿತೆಯ ಪ್ರಸ್ತಾಪಕ್ಕೆ ಕೆಲವು ಮುಸ್ಲಿಂ ಶಾಸಕರು ಸೂಚಿಸಿದ "ಈ ಕಾನೂನು ವೈಯಕ್ತಿಕ ಕಾನೂನುಗಳನ್ನು ಹೊಂದಿರುವ ಧರ್ಮಗಳನ್ನು ಹೊರತುಪಡಿಸಿ ಇತರ ಎಲ್ಲಾ ನಾಗರಿಕರಿಗೆ ಅನ್ವಯವಾಗುತ್ತದೆ" ಎಂಬ ತಿದ್ದುಪಡಿಯನ್ನು ಅಂಬೇಡ್ಕರ್ ತಿರಸ್ಕರಿಸಿದ್ದರು. ಸಂವಿಧಾನ ಸಭೆಯಲ್ಲಿ ಈ ಕುರಿತಾದ ಚರ್ಚೆಯ ಸಂದರ್ಭದಲ್ಲಿ "ಧರ್ಮಗಳಿಗೆ ತಮ್ಮ ಅನುಯಾಯಿಗಳ ಸಮಗ್ರ ಜೀವನವನ್ನು ನಿಯಂತ್ರಿಸುವ ಅಧಿಕಾರವ್ಯಾಪ್ತಿಯಿರಬೇಕು ಎಂಬ ವಾದಸರಣಿಯನ್ನು ಒಪ್ಪುವುದು ಸಾಧ್ಯವಿಲ್ಲ. ಈ ವಿಷಯಗಳಲ್ಲಿ ಶಾಸಕಾಂಗದ ಅಧಿಕಾರವನ್ನು ಏಕೆ ಮೊಟಕುಗೊಳಿಸಬೇಕು? ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಮೂಲಭೂತ ಹಕ್ಕುಗಳಿಗೆ ವಿರುದ್ಧವಾದ ತಾರತಮ್ಯ, ಅಸಮಾನತೆಗಳನ್ನು ತೊಡೆದು ಹಾಕುವುದಕ್ಕಾಗಿ ನಮಗೆ ಸ್ವಾತಂತ್ರ್ಯ ದೊರೆತಿರುವುದು" ಎಂದು ಅವರು ಹೇಳಿದ್ದರು.

ನ್ಯಾಯಾಲಯಗಳೂ ಒಂದಕ್ಕಿಂತ ಹೆಚ್ಚು ಬಾರಿ ಸಮಾನ ನಾಗರಿಕ ಸಂಹಿತೆಯನ್ನು ಜಾರಿಗೊಳಿಸುವಂತೆ ಆದೇಶ ನೀಡಿವೆ. ಶಾಬಾನೋ ಪ್ರಕರಣದಲ್ಲಿ "ಪರಸ್ಪರ ವಿರೋಧವಾಗಿರುವ ಸಿದ್ಧಾಂತಗಳಿಗೆ ನಿಷ್ಠೆಯನ್ನು ನಿರುತ್ತೇಜಿಸುವ ಸಮಾನ ನಾಗರಿಕ ಸಂಹಿತೆಯು ರಾಷ್ಟ್ರೀಯ ಏಕತೆಗೆ ಪೂರಕವಾಗಿರುತ್ತದೆ" ಎಂದು ಭಾರತದ ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯ ಪಟ್ಟಿದೆ.

ಸಮಾನ ನಾಗರಿಕ ಸಂಹಿತೆಯು ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರ ದೌರ್ಜನ್ಯ ಎಂಬಂತೆ ಬಿಂಬಿಸಲಾಗುತ್ತಿದೆ. ಮುಸ್ಲಿಂ ದೇಶಗಳೂ ಸೇರಿದಂತೆ ಜಗತ್ತಿನ ಯಾವ ದೇಶಗಳಲ್ಲಿಯೂ ಅಲ್ಪಸಂಖ್ಯಾತರಿಗೆ ತಮ್ಮ ಧರ್ಮದ ವೈಯಕ್ತಿಕ ಕಾನೂನುಗಳನ್ನು ಪಾಲಿಸುವ ಅನುಮತಿಯಿಲ್ಲ. ನಮ್ಮ ದೇಶದಲ್ಲಿಯೇ ಬ್ರಿಟಿಷರು ಮುಸ್ಲಿಮರಿಗೆ ಸಂಬಂಧಿಸಿದಂತೆ ಶರೀಯತ್ ಕಾನೂನನ್ನು ಜಾರಿಗೆ ತಂದಾಗ ಹಿಂದೂ ಜೀವನವಿಧಾನವನ್ನು ಅನುಸರಿಸುವ ಅಲ್ಪಸಂಖ್ಯಾತ ಕಚ್ಚೀ ಮೆಮನ್ ಮತ್ತು ಖೋಜಾ ಮುಸ್ಲಿಮರು ಅಸಮಾಧಾನ ಸೂಚಿಸಿದ್ದರು. ಆಗ, ಶರೀಯತ್ ಕಾನೂನು ಇಡೀ ಮುಸ್ಲಿಂ ಜನಾಂಗಕ್ಕೆ ಸಮಗ್ರವಾಗಿ ಅನ್ವಯವಾಗಬೇಕೆಂದು ಮುಸ್ಲಿಂ ಮುಖಂಡರು ವಾದಿಸಿದ್ದರು. ಹೀಗಿರುವಾಗ ಸಮಾನ ನಾಗರಿಕ ಸಂಹಿತೆಯನ್ನು ಅಲ್ಪಸಂಖ್ಯಾತರಿಗೂ ಅನ್ವಯಿಸಲು ಈಗ ವಿರೋಧವೇಕೆ? ಯೂರೋಪಿನ ದೇಶಗಳ ನಾಗರಿಕ ಸಂಹಿತೆಗಳನ್ನು ಅಲ್ಲಿಗೆ ವಲಸೆ ಹೋಗುವ ಪ್ರತಿಯೊಬ್ಬ ಅಲ್ಪಸಂಖ್ಯಾತನೂ ಗೌರವಿಸುತ್ತಾನೆ. ಹೀಗಾಗಿ ಇದು ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರ ದೌರ್ಜನ್ಯ ಎಂಬ ವಾದದಲ್ಲಿ ಹುರುಳಿಲ್ಲ.

ಸಮಾನ ನಾಗರಿಕ ಸಂಹಿತೆಯ ವಿರೋಧಿಗಳು ಅಂಬೇಡ್ಕರ್ ಮಾತನ್ನು ಕೇಳುವುದಿಲ್ಲ, ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸುವುದಿಲ್ಲ, ಸಂವಿಧಾನವನ್ನು ಗೌರವಿಸುವುದಿಲ್ಲವೆಂದರೆ ಅವರು ಗೌರವಿಸುವುದು ಶರೀಯತ್ ಕಾನೂನುಗಳನ್ನು ಎಂದಂತಾಯಿತು! ಸಮಾನ ನಾಗರಿಕ ಸಂಹಿತೆಯನ್ನು ವಿರೋಧಿಸುವ ಇದೇ ಕಾಂಗ್ರೆಸ್ ಪಕ್ಷ ಹಿಂದೂ ಸಮಾಜದ ಸುಧಾರಣೆಗಾಗಿ ಹಿಂದೂ ಸಂಹಿತೆಯ ಕಾನೂನನ್ನು ಸಂತೋಷದಿಂದ ಜಾರಿಗೊಳಿಸಿತು. ಅದೇ ಮುಸ್ಲಿಂ ಸಮಾಜದ ಸುಧಾರಣೆಯ ವಿಷಯದಲ್ಲಿ ಅದಕ್ಕೆ ಅಂಜುಕುಳಿತನವೇಕೆ? ಲಿಂಗ, ಧರ್ಮ, ಪಂಗಡ, ಜಾತಿ, ಸಮುದಾಯಗಳ ನಡುವಣ ಭೇದಭಾವವನ್ನು ನಾವು ಎಂದಿಗೂ ಸಹಿಸಿಕೊಳ್ಳಬಾರದು.

**ಸಾರ್ವತ್ರಿಕ ಒಳಿತಿಗಾಗಿ ಕಾನೂನುಗಳು:** ಸಾರ್ವತ್ರಿಕ ಒಳಿತನ್ನು ಪ್ರತಿಪಾದಿಸುವ ಕಾನೂನುಗಳನ್ನು ನಾವು ರೂಪಿಸಬೇಕು. ಕಾನೂನುಗಳು ಎಲ್ಲರಿಗೂ ಸಮಾನವಾಗಿರಬೇಕು; ಜೊತೆಗೆ ವೈಜ್ಞಾನಿಕ ನೆಲೆಯನ್ನು ಹೊಂದಿರಬೇಕು. ಆಗ ಮಾತ್ರ ಸಮಾಜದ ಪ್ರಗತಿ ಸಾಧ್ಯ. ಇದೇನೂ ಹೊಸ ವಿಷಯವಲ್ಲ. ಗರ್ಭಪಾತದ ಕಾನೂನುಗಳನ್ನು ನಿರೂಪಿಸುವಾಗ ಭ್ರೂಣದ ವಯಸ್ಸಿನ ಮಿತಿಯನ್ನು ನಿರ್ಧರಿಸಿದ್ದು ವಿಜ್ಞಾನವೇ. ಮಕ್ಕಳಿಗೆ ಕಡ್ಡಾಯವಾಗಿ ಲಸಿಕೆ ಹಾಕುವ ಕಾನೂನುಗಳನ್ನು ಪ್ರೇರೇಪಿಸಿದ್ದು ಕೂಡ ವಿಜ್ಞಾನ. ಅನೇಕ ಧರ್ಮಗಳು ಗರ್ಭಪಾತ, ಲಸಿಕೆಗಳು ಮತ್ತು ಗರ್ಭನಿರೋಧಕಗಳನ್ನು ವಿರೋಧಿಸುತ್ತವೆ. ಅಂದ (ಪುಟ 9 ರಲ್ಲಿ ಮುಂದುವರೆದಿದೆ)

# ‘ಕಾರ್ಯನಿಷ್ಠ ನಾಯಕ’

**ಕೆ. ಎಂ. ಚಿಣ್ಣಪ್ಪ**
**ನಿವೃತ್ತ ಫಾರೆಸ್ಟ್ ರೇಂಜ್ ಆಫೀಸರ್**

ನಾನು ಕಂಡಂತೆ



ಅನಂತಕುಮಾರ್



ರಾಜಕಾರಣದಲ್ಲಿ ಅನಂತಕುಮಾರ್ ಅತಿವಿಶಿಷ್ಟ ನಾಯಕರ ಸಾಲಿಗೆ ಸೇರಿದವರು. ಕೇಂದ್ರದಲ್ಲಿ ದಕ್ಷಿಣ ಭಾರತದ ಧ್ವನಿಯಾಗಿ ಸಮರ್ಥವಾಗಿ ಪ್ರತಿನಿಧಿಸಿದವರು. ಅವರು ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಸುದ್ದಿ ತಿಳಿದ ಮಿತ್ರರೊಬ್ಬರು ಅವರನ್ನು ನೋಡಲು ಹೋದರಂತೆ. ಅವರು ಬಂದ ಕಾರಣ ವಿಚಾರಿಸಿದ ಅನಂತಕುಮಾರ್, ನನ್ನನ್ನು ನೋಡುವುದಕ್ಕೆಂದು ನೀನು ಬರುವ ಅಗತ್ಯವಿಲ್ಲ. ನನ್ನಿಂದ ಏನಾದರೂ ಕೆಲಸ ಆಗಬೇಕಿದ್ದರೆ ಬರುವುದಕ್ಕೆ ಅಡ್ಡಿಯಿಲ್ಲ ಎಂದು ಹೇಳಿ ಕಳುಹಿಸಿದರು. ಅನಂತಕುಮಾರರ ಜೀವನದ ಧ್ಯೇಯ ಮತ್ತು ಕಾರ್ಯನಿಷ್ಠೆಗಳಿಗೆ ಇದೊಂದು ದ್ಯೋತಕ.

ನಾನೊಮ್ಮೆ ದಕ್ಷಿಣ ಅಮೆರಿಕಕ್ಕೆ ಪ್ರವಾಸ ಹೊರಟಿದ್ದೆ. ಹೊರಡುವ ದಿನ ನಿಶ್ಚಯವಾಗಿ ವಿಮಾನದ ಟಿಕೆಟ್ ಕೈಸೇರಿತ್ತು. ಆದರೆ, ವೀಸಾ ದೊರೆತಿರಲಿಲ್ಲ. ಪ್ರಯಾಣದ ದಿನವೂ ಸಮೀಪಿಸಿತು. ನನ್ನ ಪರದಾಟವನ್ನು ಕಂಡ ಗೆಳೆಯ ಹೆಚ್. ಎನ್. ಎ. ಪ್ರಸಾದ್, ನನ್ನ ವೀಸಾ ಪಡೆಯುವ ಸಲುವಾಗಿ ನೇರವಾಗಿ ದೆಹಲಿಯ ಕಚೇರಿಗೇ ಹೋಗುವಂತೆ ಹೇಳಿದರು. ಪ್ರಸಾದ್ ಯಾರಿಗೆ ಹೇಳಿದ್ದರೋ ಏನೋ, ನಾನು ದೆಹಲಿ ತಲುಪುವ ಹೊತ್ತಿಗೆ ವಿಮಾನ ನಿಲ್ದಾಣದಲ್ಲಿ ನನಗಾಗಿ ವಾಹನವೊಂದು ಸಿದ್ಧವಾಗಿ ನಿಂತಿತ್ತು. ವಾಹನ, ವಸತಿಗಳೇ ಅಲ್ಲದೆ ನನಗೆ ಅಗತ್ಯವಾದ ವೀಸಾ ದೊರಕಿಸಿಕೊಡುವ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಮರುದಿನ ನನ್ನನ್ನು ವಿಮಾನ ಹತ್ತಿಸುವವರೆಗೂ ಪ್ರತಿನಿಧಿಯೊಬ್ಬರು ನನ್ನ ಜೊತೆಗೇ ಇದ್ದರು. ಇದೆಲ್ಲವನ್ನೂ ಅನಂತಕುಮಾರರ ಸೂಚನೆಯಂತೆ ಏರ್ಪಡಿಸಲಾಗಿತ್ತು ಎಂಬುದನ್ನು ತಿಳಿದು ನನ್ನ ಮನಸ್ಸು ಕೃತಜ್ಞತೆಯಿಂದ ತುಂಬಿಹೋಯಿತು. ತುಂಬ ಸಂಕೋಚವೂ ಆಯಿತು. ಆದರೆ, ಸಾಮಾನ್ಯನಾದ ನನ್ನಂತೆಯೇ ನೆರವು ಬಯಸಿ ಯಾರೇ ತಮ್ಮಲ್ಲಿಗೆ ಬಂದರೂ, ದೆಹಲಿಯಲ್ಲಿ ಆಗಬೇಕಾದ ಅವರ ಕೆಲಸವನ್ನು ಮಾಡಿಕೊಡಲು ಅನಂತಕುಮಾರ್ ಮತ್ತವರ ಸಿಬ್ಬಂದಿಯ ಸಹಾಯಹಸ್ತ ಸರ್ವದಾ ಸಿದ್ಧವಾಗಿರುತ್ತಿತ್ತು.

ಪಶ್ಚಿಮ ಘಟ್ಟಗಳ ಸಂರಕ್ಷಣೆಯ ವಿಚಾರ ಪ್ರಸ್ತಾಪವಾದಾಗಲೆಲ್ಲ ಸಾಮಾನ್ಯವಾಗಿ ರಾಜಕಾರಣಿಗಳು ನಿಸರ್ಗದ ಮಹತ್ತ್ವವನ್ನು ಬದಿಗಿರಿಸಿ, ಜನಪ್ರಿಯವಾದ ನಿಲುವಿಗೆ ಅಂಟಿಕೊಳ್ಳುತ್ತಾರೆ. ಇದಕ್ಕೆ ಅಪವಾದವಾಗಿದ್ದವರು ಅನಂತಕುಮಾರ್. ಪಶ್ಚಿಮಘಟ್ಟಗಳನ್ನು ಯುನೆಸ್ಕೋ ವಿಶ್ವಪಾರಂಪರಿಕ ಪಟ್ಟಿಗೆ ಸೇರಿಸುವುದರಿಂದ ಜನರ ಹಿತಕ್ಕೆ ಧಕ್ಕೆಯಾಗುತ್ತದೆ ಎಂಬ ಕೂಗೆದ್ದಿತು. ಈ ಪ್ರತಿರೋಧವನ್ನು ಒಪ್ಪದ ಅನಂತಕುಮಾರ್, ಪಶ್ಚಿಮಘಟ್ಟಗಳನ್ನು ವಿಶ್ವಪಾರಂಪರಿಕ ತಾಣವೆಂದು ಘೋಷಿಸುವುದನ್ನು ತಡೆಯುವುದು ನೋಬೆಲ್ ಪುರಸ್ಕಾರವನ್ನು ತಿರಸ್ಕರಿಸಿದಂತೆಯೇ ಆಗುತ್ತದೆ. ನಾಡಿನ ಜನರ ನೆಮ್ಮದಿಯ ಬದುಕಿಗೆ ಪಶ್ಚಿಮಘಟ್ಟಗಳ ಸಂರಕ್ಷಣೆ ಅತ್ಯವಶ್ಯಕ ಎಂದು ಒತ್ತಿ ಹೇಳಿದ್ದರು.

ಪರಿಸರ ಸಂರಕ್ಷಣೆಯ ವಿಷಯದಲ್ಲಿ ಅನಂತಕುಮಾರ್ ಯಾವತ್ತೂ ಸಂರಕ್ಷಣಾವಾದಿಗಳ ಪರವಾಗಿರುತ್ತಿದ್ದರು. ಅರಣ್ಯನಾಶಕ್ಕೆಡೆಗೊಡಬಹುದಾದ ಯಾವುದೇ ಅಭಿವೃದ್ಧಿಕಾರ್ಯಯೋಜನೆಯನ್ನು ಅವರ ಗಮನಕ್ಕೆ ತಂದಕೂಡಲೇ ಕಾರ್ಯತತ್ಪರರಾಗಿ ಅಂತಹ ವಿನಾಶಕಾರಿ ತಂತ್ರಗಳನ್ನು ತಡೆಯುತ್ತಿದ್ದರು. ಕೇಂದ್ರ ಸಚಿವಾಲಯದ ಯಾವುದೇ ಇಲಾಖೆಯಲ್ಲಿ ಅನಂತಕುಮಾರರ ಮಾತಿಗೆ ವಿಶೇಷ ಮನ್ನಣೆಯಿರುತ್ತಿತ್ತು. ಅಧಿಕಾರಿಗಳು ಯಾವುದೇ ಇಲಾಖೆಗೆ ಸೇರಿದವರಾಗಿದ್ದರೂ, ಅನಂತಕುಮಾರ್ ಹೇಳಿದ್ದಾರೆಂದ ಕೂಡಲೇ, ಜಡತ್ವವನ್ನು ಮರೆತು ಚುರುಕಾಗಿ ಕಾರ್ಯಶೀಲರಾಗುತ್ತಿದ್ದರು. ಈ ವಿಚಾರವನ್ನು, ಅರಣ್ಯಸಂರಕ್ಷಣಾಕ್ರಮಗಳಿಗಾಗಿ ಅನಂತಕುಮಾರರನ್ನು ಕಾಣಲುಹೋದ ಸಂದರ್ಭಗಳಲ್ಲಿ ನಾನೂ ಸ್ಪಷ್ಟವಾಗಿ ಗಮನಿಸಿ ಅಚ್ಚರಿಪಟ್ಟಿದ್ದೇನೆ. ಕೇರಳಿಗರು ತಮ್ಮ ವ್ಯವಹಾರವಹಿವಾಟುಗಳಿಗಾಗಿ ಕರ್ನಾಟಕವನ್ನು ಪ್ರವೇಶಿಸುವ ಸಾರಿಗೆಸಂಪರ್ಕ ಸರ್ವದಾ ಸುಗಮವಾಗಿರಬೇಕೆಂದು ಬಯಸುತ್ತಾರೆ. ದಟ್ಟವಾದ ಅರಣ್ಯದೊಳಗೆ ಹಾದುಹೋಗುವ ಹೆದ್ದಾರಿಗಳಲ್ಲಿ ವಾಹನಗಳ ನಿರಂತರ ಸಂಚಾರದಿಂದ ವನ್ಯಜೀವಿಗಳಿಗೆ ಆಗುವ ತೊಂದರೆ ಅಷ್ಟಿಷ್ಟಲ್ಲ. ಅದು ಸಾಲದೆನ್ನುವಂತೆ, ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಮೂಲಕ ಕೇರಳದ ವೈನಾಡಿನ ಕಡೆಗೆ ರೈಲುಸಂಪರ್ಕವನ್ನು ಕಲ್ಪಿಸುವುದಕ್ಕಾಗಿ ಕೇರಳವು ಪ್ರಸ್ತಾವನೆಯೊಂದನ್ನು ಸಲ್ಲಿಸಿ, ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುತ್ತಿದೆ ಎಂಬ ಸುದ್ದಿ ಬಂದಿತು. ಅರಣ್ಯದೊಳಗೆ ರೈಲುಮಾರ್ಗ ನಿರ್ಮಿಸುವುದೆಂದರೆ, ನಿಸರ್ಗದ ಸರ್ವನಾಶವೇ ಸರಿ. ತತ್‌ಕ್ಷಣವೇ ಕಾರ್ಯಪ್ರವೃತ್ತರಾದ ನಮಗೆ ದೆಹಲಿಯಲ್ಲಿ ಯಾರನ್ನು ಸಂಪರ್ಕಿಸಬೇಕೆಂದು ಯೋಚಿಸುವ ಅಗತ್ಯವೇ ಇರಲಿಲ್ಲ. ಅನಂತಕುಮಾರರಿಗೆ ವಿಷಯ ತಲುಪಿಸಿದೆವು. ಅವರು, "ನೀವು ಅಲ್ಲಿ ಸಭೆ ನಡೆಸಿಕೊಂಡು ಚಿಂತಿಸುತ್ತ ಕೂತರೆ ಏನೂ ಆಗುವುದಿಲ್ಲ. ದೆಹಲಿಗೆ ಬನ್ನಿ, ಸಂಬಂಧಪಟ್ಟವರೊಂದಿಗೆ ಎದುರಿಗೇ ಮಾತನಾಡಬಹುದು" ಎಂದು ಆಹ್ವಾನಿಸಿದರು.

ಅದರಂತೆ ದೆಹಲಿಯಲ್ಲಿ ಅನಂತಕುಮಾರರನ್ನು ಭೇಟಿಯಾದೆವು. ಅವರ ಸಲಹೆಯಂತೆ ರೈಲ್ವೆಖಾತೆಯ ಸಚಿವರನ್ನು ಕಂಡು ಮಾತನಾಡಿ ಬರೋಣವೆಂದು ಹೋದೆವು. ಸಚಿವರ ಭೇಟಿ ಸಾಧ್ಯವಾಗಲಿಲ್ಲ. ದೂರವಾಣಿಯ ಮೂಲಕ ಸಂಪರ್ಕಿಸಬಹುದೇ ಎಂದು ಕೇಳಿದ್ದಕ್ಕೂ ಅವರ ಕಾರ್ಯದರ್ಶಿಯಿಂದ ಪ್ರತಿಕ್ರಿಯೆ ಬರಲಿಲ್ಲ.

ತಮ್ಮ ಬಿಡುವಿಲ್ಲದ ಕೆಲಸಗಳ ನಡುವೆಯೂ ಅನಂತಕುಮಾರ್ ನಮ್ಮನ್ನು ಭೇಟಿಯಾಗಿ ’ಹೋದ ಕೆಲಸ ಏನಾಯಿತು’ ಎಂದು ವಿಚಾರಿಸಿಕೊಂಡರು. ರೈಲ್ವೆಮಂತ್ರಿಗಳ ಆಪ್ತಕಾರ್ಯದರ್ಶಿಗೆ ಫೋನ್ ಮಾಡಿ’ ನಿಮ್ಮ ಸಾಹೇಬರು ಎಲ್ಲಿದ್ದಾರೆ?’ ಎಂದ ಧ್ವನಿಗೆ ಆತ ಹೆದರಿಬಿಟ್ಟ. ಅವನ ಉತ್ತರಕ್ಕೆ ಕಾಯದೆ. "ಇನ್ನು ಐದು ನಿಮಿಷಗಳಲ್ಲಿ ನನಗೆ ಮಂತ್ರಿಯವರ ಫೋನ್ ಸಂಪರ್ಕಿಸಬೇಕು, ಗೊತ್ತಾಯಿತೋ?" ಎಂದು ಫೋನ್ ಇಟ್ಟರು. ಐದು ನಿಮಿಷಗಳೊಳಗೆ ಫೋನ್ ಸದ್ದಾಯಿತು. ಸ್ವತಃ ರೈಲ್ವೆ ಸಚಿವರೇ ಮಾತನಾಡುತ್ತಿದ್ದರು!

ಅವರೊಡನೆ ಅನಂತಕುಮಾರ್ ಹೇಳಿದ್ದಿಷ್ಟೇ: "ನಿಮ್ಮನ್ನು ಕಾಣಲು ಬರುತ್ತಿರುವವರು ಸ್ವಂತ ಕೆಲಸಕ್ಕೋ ಲಾಭಕ್ಕೋ ಬಂದವರಲ್ಲ. ಇಡೀ ದೇಶದ ಹಿತಕ್ಕಾಗಿ ನೆಲಜಲ ಕಾಡುಮೇಡು ಕಾಪಾಡುವ ದೊಡ್ಡ ಕಾಳಜಿಯಿಟ್ಟುಕೊಂಡು ಬಂದಿದ್ದಾರೆ. ನಿಮ್ಮ ಕೆಲಸದ ಮಧ್ಯೆ ಅವರಿಗಾಗಿ ಸ್ವಲ್ಪ ಬಿಡುವು ಮಾಡಿಕೊಂಡು ಅವರ ಮನವಿ ಕೇಳಿ ಸೂಕ್ತವಾಗಿ ಆಗಬೇಕಾದುದನ್ನು ಮಾಡಿ"

ನಾವು ರೈಲ್ವೆ ಸಚಿವಾಲಯಕ್ಕೆ ಹೋದಾಗ ಇಡಿಯ ಅಧಿಕಾರಿವರ್ಗವೇ ನಮ್ಮ ನಿರೀಕ್ಷೆಯಲ್ಲಿದ್ದಂತೆ ತೋರಿತು. ಆದರಪೂರ್ವಕ ನಮ್ಮನ್ನು ಬರಮಾಡಿಕೊಂಡ ಸಚಿವರು ನಮ್ಮ ಅಹವಾಲನ್ನು ಆಸಕ್ತಿಯಿಂದ ಆಲಿಸಿದರು. "ಇಂತಹುದೊಂದು ಪ್ರಸ್ತಾವನೆ ನಮ್ಮ ಇಲಾಖೆಗೆ ಬಂದೇ ಇಲ್ಲ. ಬಂದರೂ ಅದನ್ನು ಪರಿಶೀಲನೆಗೇ ತೆಗೆದುಕೊಳ್ಳುವುದಿಲ್ಲ, ನೀವು ನಿಶ್ಚಿಂತೆಯಿಂದ ಇರಬಹುದು" ಎಂದು ಭರವಸೆ ಕೊಟ್ಟರು. ಹೊರಬಾಗಿಲವರೆಗೆ ಬಂದು ನಮ್ಮನ್ನು ಬೀಳ್ಕೊಂಡರು.

ಅನಂತಕುಮಾರ್ ಇಲ್ಲದ ವರ್ತಮಾನವು ಅವರಂತೆಯೇ ಆಲಿಸಬಲ್ಲ ಕಿವಿಗಾಗಿ, ಸ್ಪಂದಿಸುವ ಹೃದಯಕ್ಕಾಗಿ ತವಕಿಸುತ್ತಿದೆ. ಅವರ ಅಗಲಿಕೆಯ ವಿಷಾದದ ನಡುವೆ ಅಂತಹುದೇ ಭರವಸೆ ಮೂಡಿಸುವ ನಾಯಕತ್ವ ಲಭಿಸಬಹುದೇ ಎಂಬ ಪ್ರಶ್ನೆಯೂ ಕಾಡುತ್ತಿದೆ.

**ನಿರೂಪಣೆ: ಟಿ.ಎಸ್. ಗೋಪಾಲ್**

ವ್ಯಕ್ತಿ ವಿಶೇಷ ಮಾಲಿಕೆ

# ಬ್ರಹ್ಮರ್ಷಿ ನಾರಾಯಣ ಗುರುಗಳು


'ನಂಬೂದಿರಿಯೊಬ್ಬ ಎದುರಾದರೆ ಕೆಳಜಾತಿಯವರು ೩೨ ಹೆಜ್ಜೆ ದೂರವಿರಬೇಕು, ನಾಯರ್ ಎದುರಾದರೆ ಅವರು ೧೨ ಹೆಜ್ಜೆ ದೂರವಿರಬೇಕು' ಎಂಬ ಮಟ್ಟದ ಅಸ್ಪೃಶ್ಯತೆ ಪ್ರಚಲಿತವಿದ್ದ ಕೇರಳದಲ್ಲಿ ಹದಿನೆಂಟನೆಯ ಶತಮಾನದಲ್ಲಿ ಒಬ್ಬ ಕ್ರಾಂತದರ್ಶಿ ಗುರು ಅವತರಿಸಿದರು. "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ……." ಎಂದ ನಾರಾಯಣನ ಅವತಾರ ಶ್ರೀಕೃಷ್ಣನ ಮಾತುಗಳನ್ನು ನಿಜವಾಗಿಸಿದ ಆ ಗುರುವಿನ ಹೆಸರೂ ನಾರಾಯಣನೇ!

'ಗ್ಲಾನಿ' ಎಂದರೆ ಕಳೆಗುಂದುವುದು; ಆಯಾಸಗೊಳ್ಳುವುದು ಎಂದರ್ಥ. ಸಮಾಜವು ಅನುಸರಿಸುವ ಧರ್ಮವು ಸಮಾಜವನ್ನೇ ಕಳೆಗುಂದಿಸುವಾಗ ಅದನ್ನು ಸಮಾಜವೇ ಪುನರುತ್ಥಾನ ಮಾಡಬೇಕು – ಉದ್ಧರೇತ್ ಆತ್ಮನಾ ಆತ್ಮಾನಮ್ - ಎಂಬ ಗೀತಾವಾಕ್ಯವನ್ನು ಅರಗಿಸಿಕೊಂಡು ಅದರಂತೆ ತಾವು ಜನಿಸಿದ ಸಮಾಜದ ಜೊತೆಗೆ ಇತರ ಎಲ್ಲ ವರ್ಗದ ಜನರಿಗೂ ಆತ್ಮೋದ್ಧಾರದ ಮಾರ್ಗದರ್ಶನ ಮಾಡಿದ ಮಹಾನುಭಾವರು, ನಾರಾಯಣ ಗುರುಗಳು. ಇವರು ತಿರುವನಂತಪುರದ ಸಮೀಪದ ಚಂಬಳಂತಿ ಎಂಬ ಹಳ್ಳಿಯಲ್ಲಿ ದಿನಾಂಕ ೨೬/೦೮/೧೮೫೪ರಂದು ಅತ್ಯಂತ ಹಿಂದುಳಿದ ಈಳವ ಸಮಾಜಕ್ಕೆ ಸೇರಿದ ಮಾಡನ್ ಆಶಾನ್ ಮತ್ತು ಕುಟ್ಟಿಯಮ್ಮ ದಂಪತಿಗಳ ಮಗನಾಗಿ ಜನಿಸಿದರು. ತಂದೆ ಅಶಾನ್ ಸಂಸ್ಕೃತ, ಮಲೆಯಾಳಂ ಮತ್ತು ತಮಿಳು ಭಾಷೆಗಳಲ್ಲಿ ಪರಿಣತರಾಗಿದ್ದರು, ಜೊತೆಗೆ ಆಯುರ್ವೇದ ವೈದ್ಯರೂ ಉಪಾಧ್ಯಾಯರೂ ಆಗಿದ್ದರು. ಮಾವ ಕೃಷ್ಣನ್ ವೈದ್ಯರ್ ಕೂಡ ನಾಟಿವೈದ್ಯರಾಗಿದ್ದರು, ಜೊತೆಗೆ ಈಳವ ಸಮಾಜದ ಮುಖಂಡರಾಗಿದ್ದರು. ಹೀಗಾಗಿ, ಆರ್ಥಿಕವಾಗಿ ಮಧ್ಯಮವರ್ಗಕ್ಕೆ ಸೇರಿದ ತಂದೆ ಮತ್ತು ಮಾವನ ಪ್ರೋತ್ಸಾಹದಿಂದ ನಾರಾಯಣ ಉತ್ತಮ ಶಿಕ್ಷಣ ಪಡೆದರು.

ಚಂಬಳಂತಿ ಪಿಳ್ಳೆ ಎಂದು ಖ್ಯಾತರಾಗಿದ್ದ ಮೂತಪಿಳ್ಳೆ ಆಶಾನ್ ಅವರ ಬಳಿ ಹತ್ತುವರ್ಷ ಅಧ್ಯಯನ ಮಾಡಿದ ನಾರಾಯಣ ಗುರುಗಳು ಸಂಸ್ಕೃತದ ಅಮರಕೋಶ, ಬಾಲ ಪ್ರಬೋಧ, ಶ್ರೀಕೃಷ್ಣವಿಲಾಸ, ಮುಂತಾದ ಗ್ರಂಥಗಳ ಅಧ್ಯಯನ ಮಾಡಿದ್ದಲ್ಲದೆ ತಮಿಳಿನ ತಿರುಕ್ಕುರಳ್ ಮೇಲೆಯೂ ವ್ಯಾಖ್ಯಾನ ಮಾಡುವಷ್ಟು ಪ್ರಭುತ್ವವನ್ನು ಗಳಿಸಿದರು. ನಂತರ, ಕರ್ನಾಗಪಳ್ಳಿಯ ರಾಮನ್ ಪಿಳ್ಳೆ ಆಶಾನ್ ಅವರ ಬಳಿ ಉನ್ನತವ್ಯಾಸಂಗ ಮಾಡಿದರು. ವಿದ್ಯಾಭ್ಯಾಸದ ಅವಧಿಯಲ್ಲಿಯೇ ಅವರಿಗೆ ಅಧ್ಯಾತ್ಮದ ಸೆಳೆತ ಬಲವಾಗಿತ್ತು. ಬಾಲ್ಯದಲ್ಲಿಯೇ ಹಿರಿಯರೊಬ್ಬರ ಸಾವಿಗಾಗಿ ದುಃಖಿಸುತ್ತಿದ್ದ ಬಂಧುಗಳು ಕೆಲವೇ ದಿನಗಳಲ್ಲಿ ಅದನ್ನು ಮರೆತು ಸುಖವಾಗಿರುವುದನ್ನು ಗಮನಿಸಿ ವಿಚಲಿತರಾಗಿದ್ದ ಗುರುಗಳು ಸಮೀಪದ ಕಾಡಿನಲ್ಲಿ ಕೆಲಕಾಲ ಏಕಾಂತದಲ್ಲಿದ್ದರು.

ವಿದ್ಯಾಭ್ಯಾಸ ಮುಗಿದ ಮೇಲೆ ವಿವಾಹವಾಗುವ ಒತ್ತಾಯವನ್ನು ನಿರಾಕರಿಸಿದ ಗುರುಗಳು ಒಂದು ರೀತಿಯ ಅವಧೂತಸ್ಥಿತಿಯಲ್ಲಿ ದೇಶಾದ್ಯಂತ ಸಂಚರಿಸಿ ಪುಣ್ಯಕ್ಷೇತ್ರಗಳಲ್ಲಿ ಅನೇಕ ಸಾಧುಸಂತರನ್ನು ಭೇಟಿಯಾದರು. ಈ ಸಂದರ್ಭದಲ್ಲಿ ಚಟ್ಟಂಬಿ ಸ್ವಾಮಿ ಮತ್ತು ತೈಕಾಟ್ಟು ಅಯ್ಯಾವು ಎಂಬಿಬ್ಬರು ಸಿದ್ಧಪುರುಷರಿಂದ ಪ್ರಭಾವಿತರಾಗಿ ಕನ್ಯಾಕುಮಾರಿಯ ಮರುತ್ವಾಮಲೆಯ ಒಂದು ಗುಹೆಯಲ್ಲಿ ಆರು ವರ್ಷ ತಪಸ್ಸನ್ನಾಚರಿಸಿದರು; ಬ್ರಹ್ಮಜ್ಞಾನವನ್ನು ಸಿದ್ಧಿಸಿಕೊಂಡು ಬ್ರಹ್ಮರ್ಷಿ ನಾರಾಯಣ ಗುರುಗಳಾದರು.

ನಾರಾಯಣ ಗುರುಗಳು ಸನ್ಯಾಸಿಯಾದರೂ ಸರ್ವಸಂಗಪರಿತ್ಯಾಗಿಯಾಗಲಿಲ್ಲ. ದೀನದಲಿತರ ನಡುವೆಯೇ ಬದುಕಿ ಅವರ ಉದ್ಧಾರಕ್ಕಾಗಿ ಶ್ರಮಿಸುವ ಅಗತ್ಯವನ್ನು ಮನಗಂಡು ಕನ್ಯಾಕುಮಾರಿ, ಕೋವಳಂ, ತಿರುವನಂತಪುರ, ಮೊದಲಾದ ಊರುಗಳ ಬೆಸ್ತರ ಜೊತೆ, ಹಿಂದುಳಿದ ಜನರ ಜೊತೆ ವಾಸಮಾಡುತ್ತ ಅವರ ಜೀವನವಿಧಾನವನ್ನು ಅಧ್ಯಯನ ಮಾಡಿದರು. ಈ ಅಧ್ಯಯನದಲ್ಲಿ, ಹಿಂದುಳಿದವರ್ಗದ ಜನರ ಮೇಲಿರುವ ಸಾಮಾಜಿಕ ಕಟ್ಟುಪಾಡುಗಳು, ಅವರ ಆರ್ಥಿಕ ದೀನಾವಸ್ಥೆ ಗಳನ್ನು ಅರಿತುಕೊಂಡು ತಮ್ಮ ಮುಂದಿನ ಗುರಿಯನ್ನು ನಿಶ್ಚಿತಪಡಿಸಿಕೊಂಡರು. ಈ ನಿಟ್ಟಿನಲ್ಲಿ ತಿರುವನಂತಪುರದಿಂದ ೧೩ ಮೈಲು ದೂರವಿದ್ದ ಶಂಕರಕುಂಡವೆಂಬ ಪ್ರದೇಶದಲ್ಲಿ ದಲಿತರಿಗಾಗಿ ಮೊತ್ತಮೊದಲ ದೇವಾಲಯವನ್ನು ಸ್ಥಾಪಿಸಿದರು. ಶಿವಲಿಂಗದ ಸ್ಥಾಪನೆಯಿಂದ ಅರಿವಿನ ಕಾರಂಜಿ ಪುಟಿದ ಸಂಕೇತವಾಗಿ ಆ ಪ್ರದೇಶವನ್ನು ಅರವಿಪುರ ಎಂದೂ ಕರೆದರು. ಧಾರ್ಮಿಕ ಜ್ಞಾನದ ಜೊತೆಗೆ ಶೈಕ್ಷಣಿಕವಾಗಿಯೂ ಆರ್ಥಿಕವಾಗಿಯೂ ಹಿಂದುಳಿದ ವರ್ಗಗಳು ಬಲವಾಗಬೇಕೆಂಬ ಸಂದೇಶವನ್ನು ನೀಡಿದ ನಾರಾಯಣ ಗುರುಗಳು ಅರವಿಪುರದಲ್ಲಿ ದೇವಾಲಯ, ಮಠ, ಮಂಟಪಗಳ ಜೊತೆಗೆ ಒಂದು ವಿದ್ಯಾಲಯವನ್ನೂ ನೇಯ್ಗೆ ಕೈಗಾರಿಕೆಯನ್ನೂ ಪ್ರಾರಂಭಿಸಿದರು.'ಬ್ರಾಹ್ಮಣೇತರರೊಬ್ಬರಿಂದ ಶಿವಲಿಂಗದ ಪ್ರತಿಷ್ಠಾಪನೆ'ಗೆ ವಿರೋಧ ವ್ಯಕ್ತವಾದಾಗ ತಾನು ಪ್ರತಿಷ್ಠಾಪಿಸಿದ್ದು ಬ್ರಾಹ್ಮಣೇತರರ ಶಿವನನ್ನು,



ಬ್ರಾಹ್ಮಣರ ಶಿವಲಿಂಗವನ್ನಲ್ಲ ಎಂದು ಗುರುಗಳು ವಿರೋಧಿಗಳ ಬಾಯಿಮುಚ್ಚಿಸಿದ ಪ್ರಸಂಗವನ್ನು ಪ್ರಸಿದ್ಧ ಕವಿ ಕುಮಾರನ್ ಆಶಾನ್ ದಾಖಲಿಸಿದ್ದಾರೆ.

ಇಷ್ಟಾದರೂ, ಹಿಂದುಳಿದ ಜನರನ್ನು ಒಂದುರೀತಿಯ ಭಯ ಆವರಿಸಿಕೊಂಡಿರುವುದನ್ನು ಅವರು ಗುರುತಿಸಿದರು. ಚಾತನ್, ಚಾಮುಂಡಿಮಾಡಾನ್, ಚುಡಲಮಾಡಾನ್, ಮುತ್ತಪ್ಪನ್, ಪೂತತ್ತಾನ್ ಮುಂತಾದ ಪ್ರಾಕೃತ ದೈವಗಳನ್ನು ಪ್ರಾಣಿಬಲಿ, ಮದ್ಯನೈವೇದ್ಯ, ಪೋಲಿ ಹಾಡುಗಳ ಮೂಲಕ ಪೂಜಿಸುತ್ತಿದ್ದ ತಾಮಸಪದ್ಧತಿಯನ್ನು ತ್ಯಜಿಸಿ ಸಾತ್ವಿಕ ಪೂಜಾಪದ್ಧತಿಯನ್ನು ಅನುಸರಿಸಲು ಅವರು ಹೆದರುತ್ತಿದ್ದರು; ಶಿವ, ವಿಷ್ಣು ದೇವಾಲಯಗಳನ್ನು ಪ್ರವೇಶ ಮಾಡಲು ಹಿಂಜರಿಯುತ್ತಿದ್ದರು.

ಹೀಗಾಗಿ, "ನಿಮಗೆ ದೇವಸ್ಥಾನದ ಬಳಿ ಹೋಗುವ ಧೈರ್ಯವಿಲ್ಲದಿದ್ದರೆ ದೇವಸ್ಥಾನವನ್ನೇ ನಿಮ್ಮ ಬಳಿಗೆ ತರುತ್ತೇನೆ" ಎಂದು ಹೇಳಿದ ಗುರುಗಳು ಹಿಂದುಳಿದ ವರ್ಗದ ಜನರಿಗಾಗಿ ಕೇರಳದ ವರ್ಕಲದ ಶಿವಗಿರಿ ಬೆಟ್ಟದಲ್ಲಿ ದೇವಾಲಯವನ್ನು ಕಟ್ಟಿಸಿ ಶಾರದಾ ಮಾತೆಯನ್ನು ಪ್ರತಿಷ್ಠಾಪಿಸಿದರು. ದೀನದಲಿತರ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಪುನರುತ್ಥಾನಕ್ಕಾಗಿ ಒಂದು ಮಠ, ಸಂಸ್ಕೃತ ಮತ್ತು ಇಂಗ್ಲಿಶ್ ಪಾಠಶಾಲೆ, ರಾತ್ರಿ ಶಾಲೆ ಮುಂತಾದ ಅನೇಕ ಸಂಸ್ಥೆಗಳನ್ನು ಅವರು ಶಿವಗಿರಿಯಲ್ಲಿ ಪ್ರಾರಂಭಿಸಿದರು. ಹಿಂದುಳಿದವರ, ದಲಿತರ, ಅಸ್ಪೃಶ್ಯರ ಶೃಂಗೇರಿಯಾಗಿದ್ದ ಶಿವಗಿರಿಯು ಇಂದು ಸರ್ವಮಾನ್ಯವಾಗಿರುವ ಪವಿತ್ರ ಯಾತ್ರಾಸ್ಥಳವಾಗಿದೆ.

ಗೋಕರ್ಣದ ಗೋಕರ್ಣನಾಥನನ್ನು ಮಂಗಳೂರಿನ ಕುದ್ರೋಳಿಯಲ್ಲಿ ಸಾಕ್ಷಾತ್ಕರಿಸಿದರು. ವಕ್ಕಂ, ಅಂಚುತೆಂಗು, ಎರ್ನಾಕುಳಂ, ಅಲೆಪ್ಪಿ ಮುಂತಾದ ಕಡೆ ಶಿವನನ್ನೂ ಮಣ್ಣಂತಲದಲ್ಲಿ ಪಾರ್ವತಿಯನ್ನೂ, ಕೊಲ್ಲಂ, ನೆಲ್ಲಿಕಣ್ಣು, ಕುನ್ನುಂಪಾರ ಮುಂತಾದ ಕಡೆ ಸುಬ್ರಹ್ಮಣ್ಯನನ್ನೂ, ತಮಿಳುನಾಡಿನ ಕನ್ನಕುಡಿಯಲ್ಲಿ ಗಣಪತಿಯನ್ನೂ ಕಣ್ಣಾನೂರಿನಲ್ಲಿ ಸುಂದರೇಶ್ವರನನ್ನೂ ಕಲ್ಲಿಕೋಟೆ ಮತ್ತು ಕಾರಮುಕ್ಕದಲ್ಲಿ ಶ್ರೀಕಂಠೇಶ್ವರನನ್ನೂ ಪ್ರತಿಷ್ಠಾಪಿಸುವ ಮೂಲಕ ಎಲ್ಲ ಸಾತ್ವಿಕ ದೇವರನ್ನೂ ಜನರ ಬಳಿಗೆ ಕರೆತಂದರು. ಇಲ್ಲಿ ಹೆಸರಿಸಿರುವುದು ಕೆಲವು ದೇವಾಲಯಗಳನ್ನು ಮಾತ್ರ. ನೂರಾರು ದೇವಾಲಯಗಳ ನಿರ್ಮಾಣಕ್ಕೆ ಕಾರಣರಾದ ನಾರಾಯಣ ಗುರುಗಳು ವಿಶ್ವಕರ್ಮ ಜನಾಂಗಕ್ಕೆ ಪ್ರತ್ಯೇಕ ದೇವಾಲಯವನ್ನೂ ನಿರ್ಮಿಸಿದ್ದಾರೆ.

ಈ ಎಲ್ಲ ದೇವಾಲಯಗಳಲ್ಲಿ ಹರಿಜನರೂ ಸೇರಿದಂತೆ ಸಮಾಜದ ಎಲ್ಲ ವರ್ಗಗಳಿಗೆ ಮುಕ್ತ ಪ್ರವೇಶವಿದೆ. ದೇವಾಲಯದ ಆವರಣದ ಸ್ವಚ್ಛತೆ, ಗರ್ಭಗುಡಿಯಲ್ಲಿ ಗಾಳಿಬೆಳಕುಗಳ ವ್ಯವಸ್ಥೆಗೆ ಗುರುಗಳು ಆದ್ಯತೆ ನೀಡಿದ್ದರು. ದೇವರ ನಿರಾಕಾರಸ್ವರೂಪವನ್ನು ಅರಿವಿಗೆ ತಂದುಕೊಳ್ಳಲು ಮುರಿಕ್ಕಂಪುಳ ಗುಡಿಯಲ್ಲಿ ಸತ್ಯಂ, ಶಿವಂ, ದಯಾ ಮತ್ತು ಸ್ನೇಹ ಎಂಬ ಶಬ್ದಗಳನ್ನು ಪ್ರತಿಷ್ಠೆ ಮಾಡಿದರೆ ಕಳವಂತ್ರೋಡುವಿನಲ್ಲಿ ಓಂ ಶಾಂತಿ ಎಂಬ ಮಂತ್ರ ಬರೆದಿರುವ ನಿಲುಗನ್ನಡಿಯೇ ದೇವರು. ತ್ರಿಶೂರಿನ ಕರೆಮುಕ್ಕದಲ್ಲಿ ತತ್ತ್ವಮಸಿ ಎಂಬ ಮಹಾವಾಕ್ಯದ ಸಂಕೇತವಾಗಿ ನಂದಾದೀಪ ಆರಾಧಿಸಲ್ಪಡುತ್ತಿದೆ.

ಈಶ್ವರನಲ್ಲಿ ಭಕ್ತಿ, ಬಾಹ್ಯಾಭ್ಯಂತರ ಶುದ್ಧಿ, ಅಹಿಂಸೆ, ಸ್ನೇಹ, ಒಗ್ಗಟ್ಟು, ಎಲ್ಲರಿಗೂ ಶಿಕ್ಷಣದ ಅವಕಾಶ. ಅಧ್ಯಾತ್ಮದಲ್ಲಿ ಅಭಿರುಚಿಯಿರುವವರಿಗೆ ಸನ್ಯಾಸ – ಇವು ನಾರಾಯಣ ಗುರುಗಳ ಸಂದೇಶಗಳ ಸಾರಾಂಶ. ಮಾನವರೆಲ್ಲ ಒಂದೇ ಜಾತಿ, ಮಾನವಕಲ್ಯಾಣವೇ ವಿಶ್ವಮಾನವ ಧರ್ಮ,

ಪುಟ 8 ರಲ್ಲಿ ಮುಂದುವರೆದಿದೆ





ಪುಟ 7 ರಿಂದ

ಮದ್ಯವನ್ನು ತಯಾರಿಸಬೇಡಿ, ಸೇವಿಸಬೇಡಿ, ವಿತರಿಸಬೇಡಿ ಎಂಬುದು ಅವರ ಬೋಧನೆ. ಸರಳವಿವಾಹ, ವಿಧವಾವಿವಾಹಗಳಿಗೆ ಪ್ರೋತ್ಸಾಹ, ಬಾಲ್ಯವಿವಾಹ ಮತ್ತು ಸಮಾರಂಭಗಳಲ್ಲಿ ಆಡಂಬರ ನಿಷೇಧ, ಬಹುಪತ್ನೀತ್ವ ನಿಷೇಧ, ಅಳಿಯಸಂತಾನ ಪದ್ಧತಿಯ ರದ್ದತಿ ಮುಂತಾದ ಹಲವಾರು ಸುಧಾರಣೆಗಳಿಗೆ ಅವರು ಒತ್ತುನೀಡಿದ್ದರು. ಮಹಾತ್ಮಾ ಗಾಂಧಿಯವರು ಅಸ್ಪೃಶ್ಯತಾ ನಿವಾರಣೆಗೆ ನಾರಾಯಣ ಗುರುಗಳಿಂದ ಪ್ರೇರಣೆ ಮತ್ತು ಸಲಹೆಗಳನ್ನು ಪಡೆದಿದ್ದರು. ಆಚಾರ್ಯ ವಿನೋಬಾ ಭಾವೆ, ಸ್ವಾಮಿ ಶ್ರದ್ಧಾನಂದ, ಶ್ರೀ ರವೀಂದ್ರನಾಥ ಟಾಗೋರ್, ರಾಜಗೋಪಾಲಾಚಾರಿ ಮುಂತಾದವರು ನಾರಾಯಣ ಗುರುಗಳ ವ್ಯಕ್ತಿತ್ವ ಮತ್ತು ಕರ್ತೃತ್ವಗಳಿಗೆ ಮಾರುಹೋಗಿದ್ದರು. ಅನೇಕ ಬ್ರಾಹ್ಮಣ ಪೀಠಾಧಿಪತಿಗಳ ಮನ್ನಣೆಗೂ ಇವರು ಪಾತ್ರರಾಗಿದ್ದರು. ಶ್ರೀ ನಾರಾಯಣ ಧರ್ಮ ಪರಿಪಾಲನಾ ಯೋಗಂ (SNDP, ೧೯೦೩) ನಾರಾಯಣ ಗುರುಕುಲ (೧೯೨೩) ಶ್ರೀ ನಾರಾಯಣ ಧರ್ಮ ಸಂಘಂ (೧೯೨೭) ಅವರು ಸ್ಥಾಪಿಸಿದ ಸಂಸ್ಥೆಗಳಲ್ಲಿ ಕೆಲವು. ದೈವಚಿಂತನಂ, ದರ್ಶನಮಾಲಾ, ಆತ್ಮೋಪದೇಶ ಶತಕಂ ಮುಂತಾದ ೫೮ಕ್ಕೂ ಹೆಚ್ಚು ಕೃತಿಗಳನ್ನು ಸಂಸ್ಕೃತ, ಮಲೆಯಾಳ ಮತ್ತು ತಮಿಳು ಭಾಷೆಗಳಲ್ಲಿ ಅವರು ರಚಿಸಿದ್ದಾರೆ.

ಬ್ರಹ್ಮರ್ಷಿ ನಾರಾಯಣ ಗುರುಗಳು ೨೦/೦೯/೧೯೨೮ರಂದು ತಮ್ಮ ಅವತಾರ ಸಮಾಪ್ತಿ ಮಾಡಿದರೂ ತಮ್ಮ ಸಂದೇಶಗಳ ಮೂಲಕ ಕೀರ್ತಿಕಾಯರಾಗಿ ನಮ್ಮ ನಡುವೆ ಇದ್ದಾರೆ. ಹಲವಾರು ಹೊತ್ತಿಗೆಗಳಲ್ಲಿ ಬರೆದರೂ ಮುಗಿಯದ ನಾರಾಯಣ ಗುರುಗಳ ಚರಿತ್ರೆಯನ್ನು ಕೆಲವೇ ಶಬ್ದಗಳಲ್ಲಿ ಹಿಡಿದಿಡುವುದು ಕಷ್ಟ. ಸನಾತನ ಧರ್ಮವನ್ನು ಅಳಿಸಿಹಾಕುವ ಮೂಲಕ ಸಮಾಜವನ್ನು ಉಳಿಸುತ್ತೇವೆ ಎನ್ನುವವರ ಕಾಲದಲ್ಲಿ ಸನಾತನ ಧರ್ಮದ ಮಹತ್ವವನ್ನು ಸಮಾಜದ ಅಂಚಿನಲ್ಲಿರುವ ಜನರಿಗೂ ತಲುಪಿಸಿ ಅವರ ಸ್ವಾಭಿಮಾನವನ್ನು ಜಾಗೃತಗೊಳಿಸಿ ಆತ್ಮೋದ್ಧಾರದ ಮಾರ್ಗವನ್ನು ತೋರಿದ ನಾರಾಯಣಗುರುಗಳು ನಿತ್ಯಸ್ಮರಣೀಯರು. **-ಕೆ. ಜನಾರ್ದನ ತುಂಗ**

# ಗೀತೆಯ ಸಂದೇಶ

**ವಿದ್ಯಾ ವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ |**
**ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ || ೫.೧೮ ||**

ವಿದ್ಯಾವಿನಯ ಸಂಪನ್ನೇ – ವಿದ್ಯೆ ಮತ್ತು ವಿನಯಗಳಿಂದ ಕೂಡಿದ; ಬ್ರಾಹ್ಮಣೇ – ಬ್ರಾಹ್ಮಣರಲ್ಲಿ; ಗವಿ – ಗೋವಿನಲ್ಲಿ; ಹಸ್ತಿನಿ – ಆನೆಯಲ್ಲಿ; ಶುನಿ – ನಾಯಿಯಲ್ಲಿ; ಶ್ವಪಾಕೇ – ನಾಯಿ ತಿನ್ನುವವನಲ್ಲಿ ಪಂಡಿತಾಃ – ಜ್ಞಾನಿಗಳು; ಸಮದರ್ಶಿನಃ – ಸಮಾನವಾದ ದೃಷ್ಟಿಯನ್ನು ಹೊಂದಿರುತ್ತಾರೆ.

ಜ್ಞಾನಿಗಳು ವಿದ್ಯಾವಂತರೂ ವಿನಯಶೀಲರೂ ಆದ ಬ್ರಾಹ್ಮಣರನ್ನೂ ಗೋವುಗಳನ್ನೂ ಆನೆಗಳನ್ನೂ ನಾಯಿಯನ್ನೂ ನಾಯಿಮಾಂಸವನ್ನು ತಿನ್ನುವವನನ್ನೂ ಒಂದೇ ದೃಷ್ಟಿಯಿಂದ ಕಾಣುತ್ತಾರೆ. ಜ್ಞಾನಿಗಳು ಪ್ರತಿಯೊಂದು ಜೀವಿಯಲ್ಲಿಯೂ ಅದೇ ಅತ್ಮತತ್ತ್ವವನ್ನು ನೋಡುತ್ತಾರೆ. ಹೀಗಾಗಿ, ಅವರ ದೃಷ್ಟಿಯಲ್ಲಿ ಎಲ್ಲ ಮಾನವರೂ ಸಮಾನರು. ಎಲ್ಲ ಪ್ರಾಣಿಗಳಲ್ಲೂ ಅದೇ ಪರಮಾತ್ಮನನ್ನು ಅವರು ನೋಡುತ್ತಾರೆ. ಅವರು ಯಾವ ಜಂತುಗಳನ್ನೂ ಯಾವ ಮಾನವರನ್ನೂ ಕೀಳಾಗಿ ನೋಡುವುದಿಲ್ಲ. ಅಂತಹ ಜ್ಞಾನಿಗಳು ನಮಗೆ ಮಾದರಿಯಾಗಬೇಕು.

## ನಿತ್ಯ ಅನ್ನದಾನವೆಂಬ ನಿರಂತರ ಸೇವಾಕಾರ್ಯ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಆಗಸ್ಟ್ ತಿಂಗಳಲ್ಲಿ ವಿತರಣೆಯಾದ ಊಟದ ಅಂದಾಜು ಸಂಖ್ಯೆ | ಇಂದಿನ ವರೆಗೆ ವಿತರಣೆಯಾದ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ: ಮಧ್ಯಾಹ್ನ 2.00 ರಿಂದ 3.00 | 4,500 | 1,56,600 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ, ಜೈನ್ ಟೆಂಪಲ್ ಮುಂಭಾಗ: ಮಧ್ಯಾಹ್ನ 12.30 ರಿಂದ 1.30 | 3,000 | 1,02,500 |
| 3 | ನಗರ್ತಪೇಟೆ ಮುಖ್ಯರಸ್ತೆಯ ನಗರೇಶ್ವರ ದೇವಸ್ಥಾನ: ಮಧ್ಯಾಹ್ನ 12.30 ರಿಂದ 1.30 | 3,000 | 83,700 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ ಬೆಂಗಳೂರು: ಮಧ್ಯಾಹ್ನ 12.30 ರಿಂದ 1.30 | 4,500 | 38,550 |
| 5 | ಅನಂತ ಪ್ರೇರಣಾ ಕೇಂದ್ರ ಸೌಂತ್ ಎಂಡ್ ವೃತ್ತ: ಮಧ್ಯಾಹ್ನ 12.45 ರಿಂದ 2.00 (ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) | 1,040 | 18,120 |
| | **ಒಟ್ಟು ಅಂದಾಜು** | **16,040** | **3,99,470** |

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಹಸಿರು ಭಾನುವಾರದ ಸಂಖ್ಯೆ | ಸ್ಥಳ | ಭಾಗವಹಿಸಿದವರು | ನೆಡಲಾದ ಗಿಡಗಳ ಸಂಖ್ಯೆ/ ಚಟುವಟಿಕೆಗಳು |
|---|---|---|---|
| **399** 20/08/23 | ಸರ್ಜಾಪುರ-ಆನೇಕಲ್ ರಸ್ತೆಯ ಗೋಪಸಂದ್ರ ಬಳಿಯ ಮುತ್ತಾನಲ್ಲೂರು ಗ್ರಾಮದ ದೇವರಕೆರೆ | 'ಪರ್ಯಾವರಣ'ದ ವಿ ಮುನಿರಾಜು, ಆರ್. ಎಸ್.ಎಸ್. ಮುಖ್ಯ ಶಿಕ್ಷಕ ಶ್ರೀ ಕೆ.ವಿ. ಪುಟ್ಟರಾಜು, ಚಿಕ್ಕತಿಮ್ಮಸಂದ್ರ ಗ್ರಾ.ಪಂ. ಸದಸ್ಯ ವೇಣು, ಗಿವ್ ಮೀ ಟ್ರೀಸ್ ಪ್ರಭಾರಿ ಶ್ರೀ ಕುಮಾರ್ ಮತ್ತು ಸ್ವಯಂಸೇವಕರು, ಸಮಾಜ ಸೇವಕಿ ರಾಧಮ್ಮ, ಬಿ. ಎಂ. ಎಸ್ ಕಾಲೇಜಿನ ವಿದ್ಯಾರ್ಥಿಗಳು | 150 ಗಿಡಗಳು |
| **400** 27/08/23 | ಬೆಂಗಳೂರಿನ ಜಯನಗರ 5ನೇ ಹಂತದ ಎಂ.ಇ.ಎಸ್. ಮೈದಾನ. | ಅದಮ್ಯ ಚೇತನ, ಊಟ ಫ್ರಾಮ್ ತೋಟ ಹಾಗೂ ಗಾರ್ಡನ್ ಸಿಟಿ ಫಾರ್ಮರ್ಸ್, ಹೊಸ ಚಿಗುರು ಸಂಸ್ಥೆಯ ಶ್ರೀನಾಥ್, ಬೆಂಗಳೂರಿನ ಐಡಿಎಫ್ ಅಧ್ಯಕ್ಷ ಶ್ರೀಕಾಂತ್ ಶೆಣೈ, ಪ್ರಶಸ್ತಿ ಪುರಸ್ಕೃತರಾದ ಶಿವಣ್ಣ ಹಾಗೂ ಆನಂದ ಹವಾಲ್ದಾರ್, ಬೆಂಗಳೂರಿನ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಶೇಷಾದ್ರಿಪುರಂ ಶಿಕ್ಷಣ ಸಮೂಹ ಸಂಸ್ಥೆಗಳು (ಕೆಂಗೇರಿ), ಜೈನ್ ಶಿಕ್ಷಣ ಸಮೂಹ ಸಂಸ್ಥೆಯ ವಿದ್ಯಾರ್ಥಿಗಳು. | ಹೂಕುಂಡಗಳಲ್ಲಿ 400ಕ್ಕೂ ಹೆಚ್ಚು ಹೂವು ಮತ್ತು ತರಕಾರಿ ಸಸ್ಯಗಳು |
| **401** 03/09/23 | ಸರ್ಜಾಪುರ-ಆನೇಕಲ್ ರಸ್ತೆಯ ಗೋಪಸಂದ್ರ ಬಳಿಯ ಮುತ್ತಾನಲ್ಲೂರು ಗ್ರಾಮದ ದೇವರಕೆರೆ | ಮೈಂಡ್ ಮ್ಯಾಟ್ರಿಕ್ಸ್ ಸಂಸ್ಥೆಯ ಸುಜೀತ್ ಕುಮಾರ್, ಬಾಷ್ ಕಂಪನಿಯ ಮನೋಜ್ ಕುಮಾರ್, ಯುತ್ ಫಾರ್ ಸೇವಾ ಹಾಗೂ ಗಿವ್ ಮಿ ಟ್ರೀಸ್ ಸಂಸ್ಥೆಯ ಕಾರ್ಯಕರ್ತರು, ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಎಸ್. ಎಲ್.ಎನ್. ಕಾಲೇಜು ವಿದ್ಯಾರ್ಥಿಗಳು, ಆರ್.ಎಸ್.ಎಸ್ ಕಾರ್ಯಕರ್ತರು. | 800ಕ್ಕೂ ಅಧಿಕ ಸಸ್ಯಗಳು |
| **402** 10/09/23 | ಹಾರೋಹಳ್ಳಿ ತಾಲೂಕಿನ ಚಿಕ್ಕಮರಳವಾಡಿ, ಅನಂತಕುಮಾರ್ ಪ್ರತಿಷ್ಠಾನದ ಆವರಣ | ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀ ಗುಡ್ಡು ಇನಾಂದಾರ್, ಶ್ರೀ ಜನಾರ್ದನ ತುಂಗ, ಮರಳವಾಡಿ ವಿದ್ಯಾಸಂಸ್ಥೆ ಕಾರ್ಯದರ್ಶಿ ಶ್ರೀ ವೆಂಕಟಶೆಟ್ಟಿ, ಖಜಾಂಚಿ ಶ್ರೀ ಲಕ್ಷ್ಮಿನಾರಾಯಣ, ಮುಖ್ಯೋಪಾಧ್ಯಾಯ ವೆಂಕಟಯ್ಯ, ಗ್ರಾಮ ಪಂಚಾಯತ್‌ನ ಐವರು ಸದಸ್ಯರು, ಆರ್. ಎಸ್.ಎಸ್. ಕಾರ್ಯಕರ್ತ ಶ್ರೀ ರುದ್ರೇಶ್ ಹಾಗೂ ಕಾರ್ಯಕರ್ತರು, ಸ್ಥಳೀಯ ವಿದ್ಯಾರ್ಥಿಗಳು, ಬಿ ಎಂ ಎಸ್ ಎಂಜಿನಿಯರಿಂಗ್ ಕಾಲೇಜು ಹಾಗೂ ವಿವಿಧ ಕಾಲೇಜಿನ ವಿದ್ಯಾರ್ಥಿಗಳು, ಸಂಸ್ಥೆಯ ಸ್ವಯಂ ಸೇವಕರು ಹಾಗೂ ಸ್ಥಳೀಯರು. | 40 ಗಿಡಗಳು |

# ಘಮ ಘಮಿಸುವ ಆಕಾಶ ಮಲ್ಲಿಗೆ

ಸಸ್ಯಲೋಕ ಪರಿಚಯ ಮಾಲಿಕೆ- 24



"ಮುಗಿಲ ಮಲ್ಲಿಗೆಯೋ ಗಗನದ ತಾರೆಯೋ" ಎಂದು ಕವಿಗಳು ವರ್ಣಿಸಿರುವ ಆಕಾಶ ಮಲ್ಲಿಗೆಗೆ (Tree Jasmine) ಬಿರಟೆಮರ ಎಂತಲೂ ಹೆಸರಿದೆ. ಇದರ ವೈಜ್ಞಾನಿಕ ಹೆಸರು ಮಿಲ್ಲಿಂಗ್ಟೋನಿಯ ಹೊರ್ಟೆನ್ಸಿಸ್ (Millingtonia hortensis). ದಕ್ಷಿಣ ಏಷ್ಯಾ-ಮ್ಯಾನ್ಮಾರ್‌ನಲ್ಲಿ ಹೆಚ್ಚಾಗಿ ಬೆಳೆಯುವ ಈ ಸಸ್ಯವನ್ನು ಕಳೆದ 200 ವರ್ಷಗಳಿಂದ ಭಾರತದ ಉದ್ಯಾನಗಳಲ್ಲಿ, ರಸ್ತೆ ಬದಿಗಳಲ್ಲಿ ಬೆಳೆಸುತ್ತಿದ್ದಾರೆ. **ಸಸ್ಯವಿವರ:** ಸಾಧಾರಣ ಎತ್ತರಕ್ಕೆ ಬೆಳೆಯುವ ಆಕಾಶ ಮಲ್ಲಿಗೆಯು ಹಾಗೂ 3-4 ಮೀ. ಅಗಲದ ರೆಂಬೆಗಳ ಛಾವಣಿ ಹೊಂದಿರುತ್ತದೆ. ಮರವು ಶಂಖುವಿನ ಆಕಾರದಲ್ಲಿ ಶೋಭಿಸುತ್ತದೆ. ಈ ಮರವು ಸುಮಾರು 40 - 50 ವರ್ಷ ಬದುಕುತ್ತ-ದೆ. ಜನವರಿ - ಮಾರ್ಚ್ ನಡುವೆ ಎಲೆ ಉದುರಿಸಿಕೊಳ್ಳುವ ಈ ಮರಗಳಲ್ಲಿ ಏಪ್ರಿಲ್-ಡಿಸೆಂಬರ್ ತಿಂಗಳುಗಳ ನಡುವೆ ಬಿಳಿ ಬಣ್ಣದ, 4 - 5 ಪಕಳೆಗಳ, ಕೇಸರಯುಕ್ತ, ಕೊಳವೆಯಾಕಾರದ ಹೂವುಗಳ ಗೊಂಚಲುಗಳು ಅರಳುತ್ತವೆ. ರಾತ್ರಿಯಲ್ಲಿ ಅರಳುವ ಹೂವುಗಳು ಬೆಳಗಾಗುವ ಹೊತ್ತಿಗೆ ಉದುರಿ ಮರದ ಬುಡದಲ್ಲಿ ತೆಳುಹಾಸಿನಂತೆ ಚದುರಿ ಉದುರುತ್ತವೆ. ಬೆಳೆದ ಮರದ ಸುತ್ತಲೂ ಸಸಿಗಳು ತಾವಾಗಿಯೇ ಹುಟ್ಟಿಕೊಳ್ಳುತ್ತವೆ .ಈ ಸಸಿಗಳನ್ನು ತೆಗೆದು ಬೇರೆ ಕಡೆ ನೆಟ್ಟು ಬೆಳೆಸಬಹುದು. ಉದ್ದನೆಯ ರೆಕ್ಕೆಗಳಿರುವ ಬೀಜಗಳಿದ್ದರೂ ಟೊಂಗೆಗಳನ್ನು ಕತ್ತರಿಸಿ ನೆಡುವುದು ಒಳ್ಳೆಯದು. **ಉಪಯೋಗಗಳು:** ತೊಗಟೆಯಿಂದ (ಕಡಿಮೆ ದರ್ಜೆಯ) ಬಿರಟೆ (Cork) ತಯಾರಿಸುತ್ತಾರೆ. ಹಳದಿ ಛಾಯೆಯ ಬಿಳಿ ಬಣ್ಣದ ಮೃದುವಾದ ಕಾಂಡವನ್ನು ಟೀ ಪೆಟ್ಟಿಗೆ, ಪೀಠೋಪಕರಣಗಳು ಮತ್ತು ಅಲಂಕಾರ ವಸ್ತುಗಳು, ಕಾಗದ ಹಾಗೂ ರೆಯಾನ್ ತಯಾರಿಕೆಗೆ ಬಳಸುತ್ತಾರೆ. ತೊಗಟೆಯು ಜ್ವರ ನಿವಾರಕ ಎನ್ನಲಾಗುತ್ತಿದೆ. ಸಿಗರೇಟಿನ ತಯಾರಿಕೆಯಲ್ಲಿ ತಂಬಾಕಿಗೆ ಬದಲಿಯಾಗಿ ಈ ಮರದ ಎಲೆಗಳನ್ನು ಬಳಸುತ್ತಾರೆ. ಇದರ ಸುವಾಸನೆಯುಕ್ತ ಹೂವುಗಳನ್ನು ಅಲಂಕಾರಕ್ಕೂ ಬಳಸುತ್ತಾರೆ.



ಛಾಯಾ ಓಕ್ ಬಾಪಟ್

ಪುಟ 5 ರಿಂದ **ದೇಶದ ಸಮಗ್ರತೆಗಾಗಿ, ಪ್ರಗತಿಗಾಗಿ ಸಮಾನ ನಾಗರಿಕ ಸಂಹಿತೆ**

ಮಾತ್ರಕ್ಕೆ ಇವುಗಳ ಕುರಿತ ಕಾನೂನುಗಳನ್ನು ವಿವಿಧತೆಯ ನೆಪದಲ್ಲಿ ವಿರೋಧಿಸಬೇಕೇ? ನಮ್ಮ ಧರ್ಮದ ನಿಯಮಗಳನ್ನು ಅನುಸರಿಸುವ ಸ್ವಾತಂತ್ರ್ಯವನ್ನು ಸಂವಿಧಾನ ನಮಗೆ ನೀಡಿದೆಯೆಂದ ಮಾತ್ರಕ್ಕೆ ಮಕ್ಕಳ ಭವಿಷ್ಯವನ್ನು ಮೊಟಕುಗೊಳಿಸಲು, ಅವು ಜೀವಮಾನ ಪರ್ಯಂತ ನರಳುವಂತೆ ಮಾಡಲು ನಮಗೆ ಅಧಿಕಾರವಿದೆಯೆ? ಮೈನೆರೆಯುತ್ತಲೇ ಹುಡುಗಿಯರಿಗೆ ಮದುವೆ ಮಾಡುವ ಅನುಮತಿಯನ್ನು ಇಸ್ಲಾಂ ಧರ್ಮ ನೀಡುತ್ತದೆ. ಇದನ್ನು ಮಾನ್ಯ ಮಾಡಬೇಕೆಂಬುದು ಅಖಿಲಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಬೇಡಿಕೆ. ಗುಜರಾತ್ ನ್ಯಾಯಾಲಯ ಕೂಡ ಇದನ್ನು ಪುಷ್ಟೀಕರಿಸಿದೆ. ಭಾರತದ ಎಲ್ಲ ನಾಗರಿಕರೂ ಬಾಲ್ಯವಿವಾಹದ ಕಾನೂನುಗಳನ್ನು ಪಾಲಿಸಬೇಕಾಗಿರುವಾಗ ಎಳೆಯ ಮುಸ್ಲಿಂ ಬಾಲಕಿಯರ ದೇಹಕ್ಕೆ ಉಂಟಾಗುವ ಶಾಶ್ವತ ಹಾನಿಯನ್ನು ಒಪ್ಪಿಕೊಳ್ಳುವುದಕ್ಕಾಗುತ್ತದೆಯೆ? ಈ ನಿಯಮಗಳು ಮಹಿಳಾಪರ ಎಂದು ಸ್ತ್ರೀವಾದಿಗಳು ಮತ್ತು ಪ್ರಗತಿಪರರು ಹೇಗೆ ಒಪ್ಪಿಕೊಳ್ಳುತ್ತಾರೆ?

ಸಮಾನ ನಾಗರಿಕ ಸಂಹಿತೆಯು ನಮ್ಮನ್ನು ಒಂದುಗೂಡಿಸುತ್ತದೆ, ವಿಭಜಿಸುವುದಿಲ್ಲ. ೨೩/೧೧/೧೯೪೮ರಂದು ಸಂವಿಧಾನ ಸಭೆಯಲ್ಲಿ ನಡೆದ ಚರ್ಚೆಯ ಸಂದರ್ಭದಲ್ಲಿ ಸಮಾನ ನಾಗರಿಕ ಸಂಹಿತೆಗೂ ಧರ್ಮಕ್ಕೂ ಇರುವ ಸಂಬಂಧವೇನು ಎಂದು ಅಂಬೇಡ್ಕರ್ ಪ್ರಶ್ನಿಸಿದ್ದರು. ಹಾಗೆ ನೋಡಿದರೆ ಹಿಂದೂ ಕಾನೂನು ಸಂಹಿತೆಯ ಕರಡಿನಲ್ಲಿ ಪ್ರಸ್ತಾಪಿತವಾಗಿರುವ ಅನೇಕ ವಿಷಯಗಳು ಯಾಜ್ಞವಲ್ಕ್ಯ ಮತ್ತು ಮನುಸ್ಮೃತಿಗಳಿಗೆ ವಿರುದ್ಧವಾಗಿವೆ. ಮುಂದುವರಿದ ಸಮಾಜದಲ್ಲಿ ಇದು ಅನಿವಾರ್ಯ. ಸರಕಾರದ ಹಸ್ತಕ್ಷೇಪವಿರದೆ ಜನರ ಬದುಕಿನ ಎಲ್ಲ ಆಯಾಮಗಳನ್ನು ನಿಯಂತ್ರಿಸುವ ಅಧಿಕಾರವು ಧರ್ಮಕ್ಕಿರಬೇಕು ಎಂಬ ಪ್ರವೃತ್ತಿಯನ್ನು ನಾವು ಬಲವಾಗಿ ವಿರೋಧಿಸಬೇಕು. ದೇಶ ವಿಭಜನೆಯ ಸಂದರ್ಭದಲ್ಲಿ ಅಷ್ಟೊಂದು ಗಂಭೀರ ಸಮಸ್ಯೆಗಳ ನಡುವೆಯೂ ಎಲ್ಲ ಸಮುದಾಯಗಳನ್ನೂ, ಒಳಪಂಗಡಗಳನ್ನೂ ಒಂದುಗೂಡಿಸುವ ನಿಟ್ಟಿನಲ್ಲಿ ಮುಕ್ತವಾದ ಚರ್ಚೆ ನಡೆದಿತ್ತು. ಆದರೆ ಇಂದು ನಾವು ವಿವಿಧತೆಯ ನೆಪದಲ್ಲಿ ತಾರತಮ್ಯದ ನೀತಿಯನ್ನು ಮುಂದೆ ಮಾಡುತ್ತಿದ್ದೇವೆ. ಇದು ಪ್ರಗತಿಯಲ್ಲ, ಪ್ರತಿಗಾಮಿತನ.

## ಸರಳ ಯೋಗಾಭ್ಯಾಸ

ಎಸ್. ರಾಘವೇಂದ್ರ ಪ್ರಸಾದ್
ಅಧ್ಯಕ್ಷರು - ಸಹಬಾಳ್ವೆ

### ಶಶಾಂಕಾಸನ (Rabbit Pose)

**ಶಶಃ ಎಂದರೆ ಮೊಲ; ಆಸನ ಎಂದರೆ ಭಂಗಿ. ಆದ್ದರಿಂದ ಶಶಾಂಕಾಸನ ಎಂದರೆ ಮೊಲದ ಭಂಗಿ ಎಂದು ಅರ್ಥ.**



**ಆಸನ ಮಾಡುವ ಕ್ರಮ:** 1) ವಜ್ರಾಸನದ ಭಂಗಿಯಲ್ಲಿ ಕುಳಿತು ಅಂಗೈಗಳನ್ನು ಮೊಣಕಾಲುಗಳ ಮೇಲೆ ಇಟ್ಟುಕೊಳ್ಳಿ. ಸೊಂಟ ಮತ್ತು ಬೆನ್ನನ್ನು ನೇರವಾಗಿ ಇರಿಸಿ. ನಂತರ ನಿಧಾನವಾಗಿ ಒಂದೆರಡು ದೀರ್ಘ ಉಸಿರಾಟವಾಡಿ. 2) ಮತ್ತೆ ಉಸಿರುತೆಗೆದುಕೊಳ್ಳುತ್ತ ಕೈಗಳನ್ನು ತಲೆಯ ಮೇಲೆ ತೆಗೆದುಕೊಂಡು ಹೋಗಿ. ತೋಳುಗಳನ್ನು ನೇರವಾಗಿ ಮತ್ತು ಸಮಾನಾಂತರವಾಗಿ ಇರಿಸಿ. 3) ಮೊಣಕಾಲುಗಳನ್ನು ಅಗಲವಾಗಿ ಹಿಗ್ಗಿಸಿ. ಉಸಿರನ್ನು ಬಿಡುತ್ತಾ, ದೇಹವನ್ನು ನೆಲದ ಕಡೆಗೆ ಮುಂದಕ್ಕೆ ಬಾಗಿಸಿ. ಬಾಗುವಾಗ, ಬೆನ್ನನ್ನು ಮತ್ತು ತೋಳುಗಳನ್ನು ನೇರವಾಗಿ ಇರಿಸಿ ಜೊತೆಗೆ ಗಲ್ಲ ಅಥವಾ ತಲೆ ನೆಲದ ಮೇಲೆ ತಾಗುವಂತೆ ಇಟ್ಟುಕೊಳ್ಳಿ. 4) ಈ ಭಂಗಿಯಲ್ಲಿ ಸಾಮಾನ್ಯವಾಗಿ ಉಸಿರಾಡುತ್ತ 1-5 ನಿಮಿಷಗಳು ಉಳಿಯಿರಿ. ನಂತರ ನಿಧಾನವಾಗಿ ಉಸಿರು ತೆಗೆದುಕೊಳ್ಳುತ್ತ ವಜ್ರಾಸನದ ಭಂಗಿಗೆ ಹಿಂತಿರುಗಿ ತದನಂತರ ಸಮಸ್ಥಿತಿಗೆ ಬಂದು ಕೊಂಚ ವಿಶ್ರಮಿಸಿ.

**ಆಸನದ ಪ್ರಯೋಜನಗಳು:** ಮುಖ್ಯವಾಗಿ ಈ ಆಸನವು ನರಮಂಡಲವನ್ನು ಸಕ್ರಿಯಗೊಳಿಸುತ್ತದೆ. ಇದು ಮಾನಸಿಕ ಒತ್ತಡ, ಕ್ರೋಧ, ಖಿನ್ನತೆ, ಆತಂಕ ಇತ್ಯಾದಿಗಳನ್ನು ಕಡಿಮೆ ಮಾಡುತ್ತದೆ; ಬೆನ್ನಿನ ಕೆಳ ಸ್ನಾಯುಗಳನ್ನು ವಿಸ್ತರಿಸುತ್ತದೆ ಮತ್ತು ಡಿಸ್ಕ್‌ಗಳ ಮೇಲಿನ ಒತ್ತಡವನ್ನು ಬಿಡುಗಡೆ ಮಾಡುತ್ತದೆ. ಜೊತೆಗೆ ಮೂತ್ರಜನಕಾಂಗದ ಗ್ರಂಥಿಗಳ ಕಾರ್ಯಗಳನ್ನು ನಿಯಂತ್ರಿಸುತ್ತದೆ; ಜೀರ್ಣಕ್ರಿಯೆಗೂ ಸಹಾಯಕಾರಿ.

**ಎಚ್ಚರಿಕೆ ವಹಿಸಬೇಕಾದವರು:** ಮೊಣಕಾಲಿನ ಗಾಯ, ತೀವ್ರ ಬೆನ್ನಿನ ತೊಂದರೆ, ಭುಜ ಮತ್ತು ಕುತ್ತಿಗೆ ಸಮಸ್ಯೆಗಳು ಇರುವವರಿಗೆ ಈ ಭಂಗಿಯು ಅಡ್ಡ ಪರಿಣಾಮ ಬೀರುತ್ತದೆ. ಗರ್ಭಿಣಿ ಸ್ತ್ರೀಯರು, ತಲೆತಿರುಗುವಿಕೆ ಮತ್ತು ಅಧಿಕ ರಕ್ತದೊತ್ತಡ ಇರುವವರು ಈ ಅಭ್ಯಾಸವನ್ನು ಮಾಡುವ ಮೊದಲು ತಮ್ಮ ವೈದ್ಯರ ಸಲಹೆ ಪಡೆಯಬೇಕು.

# ಅದಮ್ಯಚೇತನ ತಿಂಗಳ ವರದಿ (15 ಆಗಸ್ಟ್ 2023 ರಿಂದ 15 ಸೆಪ್ಟೆಂಬರ್ 2023)



**ಡಾ. ಆತ್ರೆ ದಂಪತಿಗಳಿಗೆ ಗೌರವ:** ಪಶ್ಚಿಮಬಂಗಾಲದ ಶಿಬಪುರದ ಭಾರತೀಯ ಎಂಜಿನಿಯರಿಂಗ್, ವಿಜ್ಞಾನ ಹಾಗೂ ತಂತ್ರಜ್ಞಾನ ಸಂಸ್ಥೆಯ ಆಡಳಿತ ಮಂಡಳಿಯ ಮಾಜಿ ಅಧ್ಯಕ್ಷ ಪದ್ಮವಿಭೂಷಣ ಡಾ. ಆತ್ರೆ ದಂಪತಿಗಳನ್ನು ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಹಾಗೂ ಭಾರತೀಯ ಎಂಜಿನಿಯರಿಂಗ್, ವಿಜ್ಞಾನ ಹಾಗೂ ತಂತ್ರಜ್ಞಾನ ಸಂಸ್ಥೆಯ ಆಡಳಿತ ಮಂಡಳಿಗೆ ಇತ್ತೀಚೆಗೆ ಅಧ್ಯಕ್ಷರಾಗಿ ನೇಮಕವಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭೇಟಿ ನೀಡಿ ಗೌರವ ಸಲ್ಲಿಸಿದರು.

**ಚಿಣ್ಣರ ಚೇತನ:** ಅದಮ್ಯ ಚೇತನ ಸಂಸ್ಥೆಯ ಹೆಮ್ಮೆಯ 'ಚಿಣ್ಣರ ಚೇತನ' ಗೋಡೆಪತ್ರಿಕೆಯ ಸೆಪ್ಟೆಂಬರ್ ತಿಂಗಳ ಸಂಚಿಕೆಯನ್ನು ಕನ್ನಡ ಸಿನಿಮಾ ನಟಿ ಪೂಜಾಗಾಂಧಿ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಸೆ. 12ರಂದು ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಷಿಯವರ ಸಮ್ಮುಖದಲ್ಲಿ ಬಿಡುಗಡೆ ಮಾಡಿದರು.

**ಜಾಗತಿಕ ಶಾಂತಿಸ್ಥಾಪನೆಗಾಗಿ ಭಗವದ್ಗೀತೆ:** ಪ್ರತಿ ಗುರುವಾರ ಗವಿಪುರದ ಅದಮ್ಯ ಚೇತನ ಸಂಸ್ಥೆಯಲ್ಲಿ ನಡೆಯುತ್ತಿರುವ 'ಭಗವದ್ಗೀತೆ ಪಠಣ' ಕಾರ್ಯಕ್ರಮದ ಅಂಗವಾಗಿ ಆ. 17ರಂದು ಮಧ್ಯಾಹ್ನದಿಂದಲೇ ಆರಂಭವಾದ, ಗೀತೆಯ 18 ಅಧ್ಯಾಯಗಳ ಎಲ್ಲ ಶ್ಲೋಕಗಳ ಪಠಣ ಕಾರ್ಯಕ್ರಮವನ್ನು ಉದ್ದೇಶಿಸಿ ಆಶೀರ್ವಚನ ನೀಡಿದ ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಪುತ್ತಿಗೆ ಮಠದ ಶ್ರೀ ಶ್ರೀ ಸುಗುಣೇಂದ್ರ ತೀರ್ಥರು "ಭಗವದ್ಗೀತೆಯು ಯಾವುದೇ ಜಾತಿಯ ಗ್ರಂಥವಲ್ಲ. ದೇಶದ ಗಡಿಗಳಿಗೂ ಸೀಮಿತವಲ್ಲ. ಗೀತೆಯ ಸಾರವು ಇಡೀ ವಿಶ್ವಕ್ಕೆ ಅನ್ವಯಿಸುತ್ತದೆ. ಹೀಗಾಗಿ, ಭಗವದ್ಗೀತೆಯನ್ನು ಜಾಗತಿಕ ಶಾಂತಿಸ್ಥಾಪನೆಯ ಭಾಗವಾಗಿ ನೋಡಬೇಕಿದೆ. ಜಾಗತಿಕ ಶಾಂತಿ ಸ್ಥಾಪನೆಗಾಗಿ ಉತ್ತಮ ಮಾರ್ಗದರ್ಶನ ನೀಡುವ ಸಾಮರ್ಥ್ಯ ಭಗವದ್ಗೀತೆಯಲ್ಲಿದೆ. ಇಂತಹ ಜ್ಞಾನಭಂಡಾರವನ್ನು ಹೊಂದಿದ ಭಾರತಕ್ಕೆ ಮಾತ್ರ ವಿಶ್ವಶಾಂತಿ ಸ್ಥಾಪಿಸಲು ಸಾಧ್ಯವಿದೆ. ಭಗವದ್ಗೀತೆಯ ಬಗ್ಗೆ ತಿಳಿಯದ ದೇಶಗಳು ಪರಸ್ಪರ ಯುದ್ಧ ಮಾಡುತ್ತವೆ. ಯುದ್ಧ ಮಾಡುವ ಎಲ್ಲ ಸಾಮರ್ಥ್ಯವಿದ್ದೂ ಭಾರತವು ಯುದ್ಧವಿರೋಧಿಯಾಗಿದೆ. ಏಕೆಂದರೆ, ಭಾರತದಲ್ಲಿ ಭಗವದ್ಗೀತೆಯ ಸಂಸ್ಕಾರವಿದೆ" ಎಂದು ಹೇಳಿದರು.

ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿ, ಅದಮ್ಯ ಚೇತನ ಸಂಸ್ಥೆಯು ಪ್ರತಿ ಗುರುವಾರ ಭಗವದ್ಗೀತೆ ಪಠಣ ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಇಂದು ಭಗವದ್ಗೀತೆಯ ಎಲ್ಲ 18 ಅಧ್ಯಾಯ ಗಳ ಎಲ್ಲ ಶ್ಲೋಕಗಳನ್ನು ಶ್ರದ್ಧೆಯಿಂದ ಪಠಿಸಿರುವುದು ನಮ್ಮ ಸಂಸ್ಥೆಯ ಭಾಗ್ಯವೇ ಆಗಿದೆ ಎಂದರು.

**A-CHAT ಕಾರ್ಯಕ್ರಮ:** ಈ ತಿಂಗಳ ಕಾರ್ಯಕ್ರಮವು ಅದಮ್ಯ ಚೇತನ ಸಭಾಂಗಣದಲ್ಲಿ 23/08/2023 ರಂದು ನಡೆಯಿತು. ಕಲಾವಿದೆ ಕು. ಶಲೋರ್ವಿ ಜಿ. ಆತ್ರೇಯ ಅವರ ಭರತನಾಟ್ಯ, ಕೈಲಾಸ ಮಾನಸ ಸರೋವರ ಯಾತ್ರೆಯ ಕುರಿತು ಶ್ರೀ ವಿ.ಎಸ್. ಕಳಸೇಶ್ವರ ಹಂಚಿಕೊಂಡ ಅನುಭವಗಳು ಈ ತಿಂಗಳ ವಿಶೇಷ. ಯೋಗ ಪರಿಣತ ಡಾ. ಎಸ್. ರಾಘವೇಂದ್ರ ಪ್ರಸಾದ್ ಅವರು 'ಯೋಗವು ಮನೋದೈಹಿಕ ಸಮತೋಲನ ಕಾಯ್ದುಕೊಳ್ಳಲು ಹಾಗೂ ಮನೋದೈಹಿಕ ಕಾಯಿಲೆಗಳ ನಿವಾರಣೆಗೆ ಸಹಕಾರಿಯಾಗಿದೆ' ಎಂದರು. ಹಿರಿಯರಾದ ಎಂ. ಬಸವರಾಜು ಕಾರ್ಯಕ್ರಮವನ್ನು ನಿರೂಪಿಸಿದರು.

**ಗಣ್ಯರ ಭೇಟಿ:** ತ್ಯಾಜ್ಯಗಳನ್ನು ಬಳಸಿ ಬ್ರಿಕೆಟ್ಸ್ ತಯಾರಿಸುವ ಘಟಕವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಉದ್ಯಮಿ ಶ್ರೀಮತಿ ಶೈಲಜಾ ಪಾಟೀಲ್ ಹಾಗೂ ಅವರ ಪುತ್ರ ಶ್ರೀ ಸೂರಜ್ ಪಾಟೀಲ್ ಅದಮ್ಯ ಚೇತನ ಸಂಸ್ಥೆಯ ಅನ್ನಪೂರ್ಣ ಅಡುಗೆ ಮನೆಗೆ ಭೇಟಿ ನೀಡಿದ್ದರು. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 2023ರ ಸೆ.10ರಂದು ಕರ್ನಾಟಕ ಮಹಿಳಾ ಯಕ್ಷಗಾನ ಸಂಸ್ಥೆಯ ಬೆಳ್ಳಿ ಹಬ್ಬದ ಸಂಭ್ರಮದ ಸಮಾರಂಭಕ್ಕಾಗಿ ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಆಮಂತ್ರಣ ನೀಡಲು ಶ್ರೀಮತಿ ಗೌರಿ ಹಾಗೂ ಇತರರು ಅದಮ್ಯ ಚೇತನಕ್ಕೆ ಬಂದಿದ್ದರು. ಸೇಲಂನ ಡಾ. ಎಸ್. ರಂಗನಾಥನ್ ಹಾಗೂ ಎಸ್. ಅರ್ಮುದನ್, ಅಮೆರಿಕದಲ್ಲಿರುವ ಪ್ರಶಾಂತ್ ರಂಗನಾಥನ್ ಹಾಗೂ ಮೇಘಾನ್ ಹೈಟ್ ಅವರು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದ್ದರು.

**ಇತರ ಚಟುವಟಿಕೆಗಳು:** ಅದಮ್ಯ ಚೇತನ ಸಂಸ್ಥೆ ಮತ್ತು ಅದರ ಸಹಸಂಸ್ಥೆಗಳು ಭಗವದ್ಗೀತೆ ಪಠಣ, ಹಸಿರು ಭಾನುವಾರ, ಶ್ರೀ ಚೇತನ ಸಭೆ, ಶ್ರದ್ಧೆಯ ಶಿಲ್ಪ (ಆಕಾಶವಾಣಿ ಕಾರ್ಯಕ್ರಮ), ದೇಗುಲ ದರ್ಶನ, ನಿತ್ಯ ಅನ್ನದಾನ, ಪ್ಲೇಟ್ ಬ್ಯಾಂಕ್ ಮುಂತಾದ ಕಾರ್ಯಕ್ರಮಗಳನ್ನು ಎಂದಿನಂತೆ ನಿರಂತರವಾಗಿ ಮುಂದುವರಿಸಿಕೊಂಡು ಬಂದಿವೆ.

**ದೇಶ ಮೊದಲು ಸಂವಾದ:** ಅನಂತಕುಮಾರ್ ಪ್ರತಿಷ್ಠಾನವು 'ದೇಶ ಮೊದಲು' ಸಂವಾದ ಸರಣಿಯಲ್ಲಿ 'ಏಕರೂಪ ನಾಗರಿಕ ಸಂಹಿತೆಯ ಅಗತ್ಯತೆ' ಎಂಬ ವಿಷಯದ ಮೇಲೆ 09/09/2023ರಂದು ವೆಬಿನಾರ್ ಕಾರ್ಯಕ್ರಮವನ್ನು ಆಯೋಜಿಸಿತ್ತು. ಕರ್ನಾಟಕ ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್, ರಾಜಕೀಯ ವಿಶ್ಲೇಷಕ ಡಾ. ಆನಂದ್ ರಂಗನಾಥನ್ ಮತ್ತು ನ್ಯಾಯವಾದಿ ಶ್ರೀಮತಿ ಲಕ್ಷ್ಮಿ ಅಯ್ಯಂಗಾರ್ ಸಮಾನ ನಾಗರಿಕ ಸಂಹಿತೆಯ ಕುರಿತು ತಮ್ಮ ವಿಚಾರಗಳನ್ನು ಪ್ರಸ್ತಾಪಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಪ್ರೊ. ಪಿ.ವಿ. ಕೃಷ್ಣಭಟ್ಟ ಅವರು ಅಧ್ಯಕ್ಷತೆ ವಹಿಸಿದ್ದರು. ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಹಾಗೂ ಪ್ರತಿಷ್ಠಾನದ ಕಾರ್ಯದರ್ಶಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ನ್ಯಾಯವಾದಿ ಐಶ್ವರ್ಯಾ ಅನಂತಕುಮಾರ್ ಮುಂತಾದವರು ಭಾಗವಹಿಸಿದ್ದರು.





## ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Venkatesh Manu**
Inputs: **Poornaprajna / Srikanth K / Sujatha GT**
Photographs: **Gopal TS / Chakrapani Kengeri / Internet Sources / AKP / ACF**
Acknowledgements: **Chaya Bapat / G M Inamdar**
Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in



ಸ್ಪಷ್ಟನೆ: ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯ ಸೇವಾ (ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ)



ಎಬಿವಿಪಿಯ ಕೇಂದ್ರೀಯ ತಂಡದ ಹಿರಿಯ ಸದಸ್ಯ ಹಾಗೂ ಬಿಜೆಪಿಯ ಹಿರಿಯ ನಾಯಕ, 80ರ ಹರೆಯದ ಉತ್ಸಾಹಿ ಶ್ರೀ ಕೆ.ಎನ್. ಗೋವಿಂದಾಚಾರ್ಯ ಅವರನ್ನು ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀ ಎಂ. ಪಿ. ಕುಮಾರ್, ಎಂ. ಎಚ್. ಶ್ರೀಧರ್ ಮತ್ತಿತರ ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಿದರು



ಹದಿನೈದು ವರ್ಷಗಳ ವರೆಗೆ ಛತ್ತೀಸಗಡ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಡಾ. ರಮಣ್ ಸಿಂಗ್ ಅವರನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ರಾಯಪುರದಲ್ಲಿ ಭೇಟಿ ಮಾಡಿದರು.



ಕೇಂದ್ರ ಹಣಕಾಸು ಮಂತ್ರಿ, ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಇತ್ತೀಚೆಗೆ ನವದೆಹಲಿಯಲ್ಲಿ ಭೇಟಿ ಮಾಡಿದರು.




ಶ್ರೀಮದ್ಭಗವದ್ಗೀತಾ ಶ್ಲೋಕ ಪಠಣದ 85ನೇ ವಾರದ ಕಾರ್ಯಕ್ರಮ. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.




ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಸೆ.11 ರಂದು ನಡೆದ ಕರ್ನಾಟಕ ಕಲಾ ವೇದಿಕೆ ಮಹಿಳಾ ಯಕ್ಷಗಾನ ಸಂಸ್ಥೆಯ ಬೆಳ್ಳಿ ಹಬ್ಬದ ಸಮಾರಂಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.



ಅನಂತಕುಮಾರ್ ಪ್ರತಿಷ್ಠಾನದ ಪ್ರತಿಷ್ಠಿತ ಕಾರ್ಯಕ್ರಮ 'ದೇಶ ಮೊದಲು' ಆನ್‌ಲೈನ್ ಸಂವಾದದಲ್ಲಿ ಭಾಗವಹಿಸಿದ ನಿವೃತ್ತ ನ್ಯಾಯಮೂರ್ತಿ ಶ್ರೀ ಎನ್. ಕುಮಾರ್, ನ್ಯಾಯವಾದಿ ಶ್ರೀಮತಿ ಲಕ್ಷ್ಮಿ ಅಯ್ಯಂಗಾರ್ ಹಾಗೂ ಶ್ರೀಮತಿ ತೇಜಸ್ವಿನಿ ಅನಂತಕುಮಾರ್.



ಅದಮ್ಯ ಚೇತನ ಸಂಸ್ಥೆಯ ಅನ್ನಪೂರ್ಣ ಅಡುಗೆ ಮನೆಗೆ ಭೇಟಿ ನೀಡಿದ ಸೇಲಂನ ಡಾ. ಎಸ್. ರಂಗನಾಥನ್ ಹಾಗೂ ಎಸ್. ಅರ್ಮುದನ್, ಅಮೆರಿಕದಲ್ಲಿರುವ ಪ್ರಶಾಂತ್ ರಂಗನಾಥನ್ ಹಾಗೂ ಮೇಘಾನ್ ಹೈಟ್.

## ಅನಂತ ಚಿತ್ರಸಂಪುಟ

**ಸಸ್ಯಾಗ್ರಹದ ಅಂಗವಾಗಿ ದಿನಾಂಕ 03/01/2016 ರಿಂದ ಪ್ರಾರಂಭವಾದ ಹಸಿರು ಭಾನುವಾರ ಕಾರ್ಯಕ್ರಮದಲ್ಲಿ ಅನಂತಕುಮಾರರ ಜೊತೆಗೆ ಅನೇಕ ಗಣ್ಯರು ಭಾಗವಹಿಸುತ್ತಿದ್ದರು.**

















